8. ಅಲ್ ಅನ್‌ಫಾಲ್

ಸೂ. 75 | ರು. 10

آيَاتُهَا ٧٥ سُورَةُ الْأَنْفَالِ مَدَنِيَّةٌ رُكُوعَاتُهَا ١٠

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ನಿಮ್ಮೊಡನೆ 'ಅನ್‌ಫಾಲ್'(ಸಮರಾರ್ಜಿತ ಸೊತ್ತು)ನ ಕುರಿತು ಪ್ರಶ್ನಿಸುತ್ತಾರೆ.[1] ಈ 'ಸಮರಾರ್ಜಿತ ಸೊತ್ತು' ಅಲ್ಲಾಹ್ ಮತ್ತು ಅವನ ರಸೂಲರದ್ದು. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ಪರಸ್ಪರ ಸಂಬಂಧಗಳನ್ನು ಸರಿಪಡಿಸಿರಿ. ನೀವು ಮೂಮಿನ್ ಆಗಿದ್ದರೆ ಅಲ್ಲಾಹ್ ಹಾಗೂ ಅವನ ರಸೂಲರನ್ನು ಅನುಸರಿಸಿರಿ' ಎಂದು ಹೇಳಿರಿ.[2]

يَسْــَٔلُوْنَكَ عَنِ الْاَنْفَالِ ؕ قُلِ الْاَنْفَالُ لِلّٰهِ وَ الرَّسُوْلِ ۚ فَاتَّقُوا اللّٰهَ وَ اَصْلِحُوْا ذَاتَ بَيْنِكُمْ ۪ وَ اَطِيْعُوا اللّٰهَ وَ رَسُوْلَهٗۤ اِنْ كُنْتُمْ مُّؤْمِنِيْنَ ①

2. ಅಲ್ಲಾಹನ ಪ್ರಸ್ತಾಪ ಕೇಳಿದೊಡನೆ ಹೃದಯದಲ್ಲಿ ನಡುಕವುಂಟಾಗುವವರೇ ನಿಜವಾದ ಮೂಮಿನರು. ಅವರ ಮುಂದೆ ಅಲ್ಲಾಹನ 'ಸೂಕ್ತ'ಗಳನ್ನು ಓದಿದಾಗ ಅವರ ಸತ್ಯವಿಶ್ವಾಸ ವೃದ್ಧಿಯಾಗುತ್ತದೆ ಮತ್ತು ಅವರು ತಮ್ಮ ಪ್ರಭುವಿನ ಮೇಲೆ ಭರವಸೆಯಿಡುತ್ತಾರೆ.

اِنَّمَا الْمُؤْمِنُوْنَ الَّذِيْنَ اِذَا ذُكِرَ اللّٰهُ وَجِلَتْ قُلُوْبُهُمْ وَ اِذَا تُلِيَتْ عَلَيْهِمْ اٰيٰتُهٗ زَادَتْهُمْ اِيْمَانًا وَّ عَلٰى رَبِّهِمْ يَتَوَكَّلُوْنَ ②

3. ಅವರು ನಮಾಝನ್ನು ಸಂಸ್ಥಾಪಿಸುತ್ತಾರೆ ಮತ್ತು ನಾವು ಅವರಿಗೆ ನೀಡಿದುದರಿಂದ (ನಮ್ಮ ಮಾರ್ಗದಲ್ಲಿ) ಖರ್ಚು ಮಾಡುತ್ತಾರೆ.

الَّذِيْنَ يُقِيْمُوْنَ الصَّلٰوةَ وَ مِمَّا رَزَقْنٰهُمْ يُنْفِقُوْنَ ③

4. ಇಂಥವರೇ ನಿಜವಾದ ಸತ್ಯವಿಶ್ವಾಸಿಗಳು. ಅವರಿಗಾಗಿ ಅವರ

اُولٰٓئِكَ هُمُ الْمُؤْمِنُوْنَ حَقًّا ؕ لَهُمْ دَرَجٰتٌ

---

1. 'ಅನ್‌ಫಾಲ್' ಎಂಬುದು ನಫಿಲ್‌ನ ಬಹುವಚನ. ಅರಬಿ ಭಾಷೆಯಲ್ಲಿ ತನ್ನ ಬಾಧ್ಯತೆ ಅಥವಾ ಹಕ್ಕಿಗೆ ಮೀರಿದ್ದನ್ನು 'ನಫಿಲ್' ಎನ್ನುತ್ತಾರೆ. ದಾಸನ ಕಡೆಯಿಂದಾದರೆ ಇದರ ಅರ್ಥ ತನ್ನ ಪ್ರಭುವಿಗೆ ಸಲ್ಲಬೇಕಾದ ಕರ್ತವ್ಯಕ್ಕಿಂತ ಹೆಚ್ಚಿನ ಸೇವೆಯನ್ನು ತನ್ನಿಷ್ಟದಂತೆ ಸ್ವಯಂ ಪ್ರೇರಣೆಯಿಂದ ಮಾಡುವುದಾಗಿದೆ. ಉದಾ: ನಫಿಲ್ ನಮಾಝ್- ಪ್ರಭುವಿನ ಕಡೆಯಿಂದಾದರೆ ತನ್ನ ದಾಸನಿಗೆ ಅವನ ಹಕ್ಕಿಗಿಂತ ಹೆಚ್ಚಿನ ಉಡುಗೊರೆ ಮತ್ತು ಅನುಗ್ರಹವನ್ನು ಕರುಣಿಸುವುದಾಗಿದೆ. ಇಲ್ಲಿ ಅನ್‌ಫಾಲ್ ಎಂಬ ಪದ ಬದ್ರ್ ಯುದ್ಧದ ಮೂಲಕ ಮುಸ್ಲಿಮರ ಕೈ ಸೇರಿದ್ದ ಸಮರಾರ್ಜಿತ ಸೊತ್ತಿಗೆ ಉಪಯೋಗಿಸಲಾಗಿದೆ. ಇದು ನಿಮ್ಮ ಸಂಪಾದನೆಯಲ್ಲ ಬದಲಾಗಿ ಅಲ್ಲಾಹನು ಕರುಣಿಸಿದ ಅನುಗ್ರಹವಾಗಿದೆ ಎಂದು ಮನದಟ್ಟು ಮಾಡಲಿಕ್ಕಾಗಿಯೇ ಇಲ್ಲಿ ಅದಕ್ಕೆ 'ಅನ್‌ಫಾಲ್' ಎಂಬ ಪದವನ್ನು ಉಪಯೋಗಿಸಲಾಗಿದೆ.
2. ಈ ಸಂಪತ್ತಿನ ವಿತರಣೆಯ ಕುರಿತು ಯಾವುದೇ ಆದೇಶ ಬರುವುದಕ್ಕೆ ಮೊದಲೇ ಮುಸ್ಲಿಮರ ವಿಭಿನ್ನ ಸಮೂಹಗಳು ತಮ್ಮತಮ್ಮ ಪಾಲಿನ ಬಗ್ಗೆ ವಾದಿಸಿಕೊಳ್ಳಲಾರಂಭಿಸಿದ್ದವು. ಆದ್ದರಿಂದಲೇ ಈ ಮಾತು ಹೇಳಲಾಗಿದೆ.

ಪ್ರಭುವಿನ ಬಳಿ ಉನ್ನತ ಸ್ಥಾನಗಳಿವೆ. ಅಪರಾಧಗಳಿಗೆ ಕ್ಷಮೆ ಇದೆ ಮತ್ತು ಅತ್ಯುತ್ತಮ ಜೀವನಾಧಾರವಿದೆ.

عِنْدَ رَبِّهِمْ وَمَغْفِرَةٌ وَّرِزْقٌ كَرِيْمٌ ﴿٤﴾

5. ನಿಮ್ಮ ಪ್ರಭು ನಿಮ್ಮನ್ನು ನಿಮ್ಮ ನಿವಾಸದಿಂದ ಸತ್ಯಸಹಿತ ಹೊರ ಹಾಕಿದ್ದನು ಮತ್ತು ಸತ್ಯವಿಶ್ವಾಸಿಗಳ ಪೈಕಿ ಒಂದು ಪಂಗಡಕ್ಕೆ ಇದು ಅಪ್ರಿಯವಾಗಿತ್ತು.

كَمَآ اَخْرَجَكَ رَبُّكَ مِنْۢ بَيْتِكَ بِالْحَقِّ
وَاِنَّ فَرِيْقًا مِّنَ الْمُؤْمِنِيْنَ لَكٰرِهُوْنَ ﴿٥﴾

6. ಅದು ಸುಸ್ಪಷ್ಟವಾಗಿ ಪ್ರತ್ಯಕ್ಷವಾಗಿದ್ದರೂ ಅವರು ಆ ಸತ್ಯದ ವಿಷಯದಲ್ಲಿ ನಿಮ್ಮೊಂದಿಗೆ ತರ್ಕಿಸುತ್ತಿದ್ದರು. ತಮ್ಮ ಕಣ್ಣೆದುರೇ ಕಾಣುತ್ತಿರುವ ಮೃತ್ಯುವಿನ ಕಡೆಗೆ ಅಟ್ಟಲಾಗುತ್ತಿದೆಯೋ ಎಂಬಂತೆ ಇತ್ತು ಅವರ ಸ್ಥಿತಿ. (ಈ ಸಮರಾರ್ಜಿತದ ವಿಷಯದಲ್ಲಿಯೂ ಆಗ ಸಂಭವಿಸಿದಂತಹ ಪರಿಸ್ಥಿತಿಯೇ ಉಂಟಾಗುತ್ತಲಿದೆ.)

يُجَادِلُوْنَكَ فِى الْحَقِّ بَعْدَ مَا تَبَيَّنَ كَاَنَّمَا
يُسَاقُوْنَ اِلَى الْمَوْتِ وَهُمْ يَنْظُرُوْنَ ﴿٦﴾

7. ಎರಡು ತಂಡಗಳ ಪೈಕಿ ಒಂದು ನಿಮಗೆ ಸಿಗುವುದೆಂದು ಅಲ್ಲಾಹನು ನಿಮಗೆ ವಾಗ್ದಾನ ಮಾಡುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.[3] ದುರ್ಬಲ ತಂಡವು ನಿಮಗೆ ಸಿಗಬೇಕೆಂದು ನೀವು ಇಚ್ಛಿಸುತ್ತಿದ್ದಿರಿ. ಆದರೆ ತನ್ನ ಆದೇಶಗಳಿಂದ ಸತ್ಯವನ್ನು ಸತ್ಯವಾಗಿ ಮಾಡಿ ತೋರಿಸಿ, ಸತ್ಯನಿಷೇಧಿಗಳ ಮೂಲೋತ್ಪಾಟನಗೊಳಿಸಿಬಿಡಬೇಕೆಂಬುದು ಅಲ್ಲಾಹನ ಇಚ್ಛೆ ಆಗಿತ್ತು.

وَاِذْ يَعِدُكُمُ اللّٰهُ اِحْدَى الطَّآئِفَتَيْنِ اَنَّهَا
لَكُمْ وَتَوَدُّوْنَ اَنَّ غَيْرَ ذَاتِ الشَّوْكَةِ
تَكُوْنُ لَكُمْ وَيُرِيْدُ اللّٰهُ اَنْ يُّحِقَّ الْحَقَّ
بِكَلِمٰتِهٖ وَيَقْطَعَ دَابِرَ الْكٰفِرِيْنَ ﴿٧﴾

8. ಇದು ಅಪರಾಧಿಗಳಿಗೆ ಎಷ್ಟೇ ಅಪ್ರಿಯವಾಗಿದ್ದರೂ ಸತ್ಯವನ್ನು ಸತ್ಯವಾಗಿಯೂ ಮಿಥ್ಯವನ್ನು ಮಿಥ್ಯವಾಗಿಯೂ ಮಾಡಿತೋರಿಸಲಿಕ್ಕಾಗಿತ್ತು.

لِيُحِقَّ الْحَقَّ وَيُبْطِلَ الْبَاطِلَ وَلَوْ
كَرِهَ الْمُجْرِمُوْنَ ﴿٨﴾

9. ನೀವು ನಿಮ್ಮ ಪ್ರಭುವಿನೊಡನೆ ಮೊರೆಯಿಡುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ನಾನು ನಿಮ್ಮ ಸಹಾಯಕ್ಕಾಗಿ ಸರದಿಯಂತೆ ಒಂದು ಸಾವಿರ ದೇವಚರರನ್ನು ಕಳುಹಿಸುತ್ತಲಿದ್ದೇನೆಂದು ಅವನು ಉತ್ತರಿಸಿದನು.

اِذْ تَسْتَغِيْثُوْنَ رَبَّكُمْ فَاسْتَجَابَ لَكُمْ اَنِّىْ
مُمِدُّكُمْ بِاَلْفٍ مِّنَ الْمَلٰٓئِكَةِ مُرْدِفِيْنَ ﴿٩﴾

10. ನಿಮಗೆ ಸುವಾರ್ತೆ ಹಾಗೂ ಅದರಿಂದ ನಿಮ್ಮ ಮನಸ್ಸಿಗೆ ನೆಮ್ಮದಿಯುಂಟಾಗುವಂತಾಗಲಿಕ್ಕಾಗಿ ಮಾತ್ರ ಅಲ್ಲಾಹನು ನಿಮಗೆ ಈ ವಿಷಯವನ್ನು ತಿಳಿಯಪಡಿಸಿದನು. ಸಹಾಯವು ಯಾವಾಗ ಲಭಿಸಿದರೂ ಅದು ಅಲ್ಲಾಹನ ಕಡೆಯಿಂದಲೇ ಲಭಿಸುತ್ತದೆ.

وَمَا جَعَلَهُ اللّٰهُ اِلَّا بُشْرٰى وَلِتَطْمَئِنَّ بِهٖ
قُلُوْبُكُمْ ۚ وَمَا النَّصْرُ اِلَّا مِنْ عِنْدِ اللّٰهِ ؕ
اِنَّ اللّٰهَ عَزِيْزٌ حَكِيْمٌ ﴿١٠﴾ ع

3. ಅರ್ಥಾತ್- ಸಿರಿಯಾದ ಕಡೆಯಿಂದ ಬರುತ್ತಿದ್ದ ವ್ಯಾಪಾರಿ ತಂಡ ಅಥವಾ ಮಕ್ಕಾದಿಂದ ಬರುತ್ತಿದ್ದ ಕುರೈಶರ ಸೇನೆ.

ನಿಶ್ಚಯವಾಗಿಯೂ ಅಲ್ಲಾಹನು ಮಹಾಪ್ರತಾಪಿಯೂ ಧೀಮಂತನೂ ಆಗಿರುತ್ತಾನೆ.

11. ಅಲ್ಲಾಹನು ತನ್ನ ಕಡೆಯಿಂದ ತೂಕಡಿಕೆಯ ರೂಪದಲ್ಲಿ ನಿಮ್ಮ ಮೇಲೆ ನೆಮ್ಮದಿ ಹಾಗೂ ನಿರ್ಭಯತೆಯನ್ನು ಆಚ್ಛಾದಿಸುತ್ತಿದ್ದ[4] ಹಾಗೂ ನಿಮ್ಮನ್ನು ಶುದ್ಧೀಕರಿಸಲಿಕ್ಕೂ ಶೈತಾನನಿಂದ ಹಾಕಲ್ಪಟ್ಟ ಮಾಲಿನ್ಯವನ್ನು ನಿಮ್ಮಿಂದ ದೂರೀಕರಿಸಲಿಕ್ಕೂ ನಿಮ್ಮ ಹೃದಯಗಳಲ್ಲಿ ಧೈರ್ಯ ತುಂಬಲಿಕ್ಕೂ ತನ್ಮೂಲಕ ನಿಮ್ಮ ಪಾದಗಳನ್ನು ನೆಲೆಯೂರಿಸಲಿಕ್ಕೂ ಆಕಾಶದಿಂದ ನಿಮ್ಮ ಮೇಲೆ ಮಳೆ ಸುರಿಸುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.

إِذْ يُغَشِّيكُمُ النُّعَاسَ أَمَنَةً مِّنْهُ وَيُنَزِّلُ
عَلَيْكُم مِّنَ السَّمَاءِ مَاءً لِّيُطَهِّرَكُم بِهِ
وَيُذْهِبَ عَنكُمْ رِجْزَ الشَّيْطَانِ وَلِيَرْبِطَ
عَلَىٰ قُلُوبِكُمْ وَيُثَبِّتَ بِهِ الْأَقْدَامَ ﴿١١﴾

12. ನಿಮ್ಮ ಪ್ರಭು ದೇವಚರರಿಗೆ, "ನಾನು ನಿಮ್ಮೊಂದಿಗೆ ಇದ್ದೇನೆ. ನೀವು ಸತ್ಯವಿಶ್ವಾಸಿಗಳನ್ನು ಸುಸ್ಥಿರಗೊಳಿಸಿರಿ. ನಾನೀಗಲೇ ಸತ್ಯನಿಷೇಧಿಗಳ ಹೃದಯಗಳಲ್ಲಿ ಭೀತಿಯನ್ನುಂಟು ಮಾಡುತ್ತೇನೆ. ನೀವು ಅವರ ಗೋಣುಗಳ ಮೇಲೂ ಹೊಡೆಯಿರಿ ಮತ್ತು ಎಲ್ಲ ಸಂದುಸಂದುಗಳಿಗೂ ಹೊಡೆಯಿರಿ"[5] ಎಂದು ಸೂಚನೆ ಕೊಡುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.

إِذْ يُوحِي رَبُّكَ إِلَى الْمَلَائِكَةِ أَنِّي مَعَكُمْ
فَثَبِّتُوا الَّذِينَ آمَنُوا ۚ سَأُلْقِي فِي قُلُوبِ
الَّذِينَ كَفَرُوا الرُّعْبَ فَاضْرِبُوا فَوْقَ
الْأَعْنَاقِ وَاضْرِبُوا مِنْهُمْ كُلَّ بَنَانٍ ﴿١٢﴾

13. ಇದು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಅವರು ವಿರೋಧಿಸಿದುದರಿಂದ. ಅಲ್ಲಾಹ್ ಮತ್ತು ಅವನ ಸಂದೇಶವಾಹಕನನ್ನು ವಿರೋಧಿಸಿದವನನ್ನು ಅಲ್ಲಾಹನು ಅತ್ಯಂತ ಕಠಿಣವಾಗಿ ದಂಡಿಸುವವನಾಗಿರುತ್ತಾನೆ.

ذَٰلِكَ بِأَنَّهُمْ شَاقُّوا اللَّهَ وَرَسُولَهُ ۚ وَمَن
يُشَاقِقِ اللَّهَ وَرَسُولَهُ فَإِنَّ اللَّهَ شَدِيدُ
الْعِقَابِ ﴿١٣﴾

14. ಇದು[6] ನಿಮಗಿರುವ ಶಿಕ್ಷೆ. ಈಗ ಇದನ್ನು ಸವಿಯಿರಿ. ಸತ್ಯವನ್ನು ನಿಷೇಧಿಸುವವರಿಗಾಗಿ ನರಕಾಗ್ನಿಯ ಯಾತನೆ ಇದೆಯೆಂಬುದು ನಿಮಗೆ ತಿಳಿದಿರಲಿ.

ذَٰلِكُمْ فَذُوقُوهُ وَأَنَّ لِلْكَافِرِينَ
عَذَابَ النَّارِ ﴿١٤﴾

4. ಉಹುದ್ ಯುದ್ಧದಲ್ಲೂ ಮುಸ್ಲಿಮರಿಗೆ ಇಂತಹದೇ ಅನುಭವ ಆಗಿತ್ತು. ಅದನ್ನೇ ಆಲಿ ಇಮ್ರಾನ್ ಅಧ್ಯಾಯದ 154ನೆಯ ಸೂಕ್ತದಲ್ಲಿ ವಿವರಿಸಲಾಗಿದೆ.

5. ಇಲ್ಲಿಯ ತನಕ ಬದ್ರ್ ಯುದ್ಧದ ಘಟನಾವಳಿಗಳನ್ನು ಒಂದೊಂದಾಗಿ ನೆನಪಿಸಲಾಗಿರುವುದರ ಉದ್ದೇಶ ವಾಸ್ತವದಲ್ಲಿ 'ಅನ್‌ಫಾಲ್' ಎಂಬ ಪದದ ಅರ್ಥವನ್ನು ವಿವರಿಸುವುದಾಗಿದೆ. ಈ ಸಮರಾರ್ಜಿತ ಸೊತ್ತು ನಮ್ಮ ಮರಣಾಂತಿಕ ಹೋರಾಟದ ಪ್ರತಿಫಲವೆಂದು ಭಾವಿಸಿ ನೀವು ಅದರ ಮಾಲಕರಾಗಿ ಮಾರ್ಪಡದಿರಿ. ಇದು ವಾಸ್ತವದಲ್ಲಿ ದೇವನ ಅನುಗ್ರಹವಾಗಿದೆ. ಅನುಗ್ರಹವನ್ನು ದಯಪಾಲಿಸುವವನು ಮಾತ್ರ ಅದರ ಒಡೆಯ ಎಂದು ಆರಂಭದಲ್ಲಿ ಹೇಳಲಾಗಿದೆ. ಇಲ್ಲಿ ಆಧಾರ ಪ್ರಮಾಣದ ರೂಪದಲ್ಲಿ ಘಟನಾವಳಿಗಳನ್ನು ಎಣಿಸಲಾಗುತ್ತಿದೆ. ಇದರಲ್ಲಿ ನಿಮ್ಮ ಹೋರಾಟ, ಧೈರ್ಯ ಮತ್ತು ಸ್ಥೈರ್ಯಗಳ ಪಾಲೆಷ್ಟು ಹಾಗೂ ಅಲ್ಲಾಹನ ಅನುಗ್ರಹದ ಪಾಲೆಷ್ಟು ಎಂದು ಸ್ವತಃ ಎಣಿಕೆ ಮಾಡಿಕೊಳ್ಳಿ. ಆದ್ದರಿಂದ ಈ ಸೊತ್ತು ಯಾವ ರೀತಿ ವಿತರಿಸಬೇಕು ಎಂದು ನಿರ್ಧರಿಸಬೇಕಾದುದೂ ನೀವಲ್ಲ. ಬದಲಾಗಿ ಅಲ್ಲಾಹನಾಗಿದ್ದಾನೆ.

6. ಬದ್ರ್‌ನಲ್ಲಿ ಸೋಲನುಭವಿಸಿದ ಕುರೈಶರ ಸತ್ಯನಿಷೇಧಿಗಳನ್ನು ಉದ್ದೇಶಿಸಿ ಈ ಮಾತು ಹೇಳಲಾಗಿದೆ.

15. ಓ ಸತ್ಯವಿಶ್ವಾಸಿಗಳೇ, ನೀವು ಒಂದು ಸೇನೆಯ ರೂಪದಲ್ಲಿ ಸತ್ಯನಿಷೇಧಿಗಳನ್ನು ಎದುರ್ಗೊಂಡಾಗ ಯುದ್ಧದಲ್ಲಿ ಹಿಮ್ಮೆಟ್ಟಬೇಡಿರಿ.

يَٰٓأَيُّهَا ٱلَّذِينَ ءَامَنُوٓا۟ إِذَا لَقِيتُمُ ٱلَّذِينَ
كَفَرُوا۟ زَحْفًا فَلَا تُوَلُّوهُمُ ٱلْأَدْبَارَ ﴿١٥﴾

16. ಇಂತಹ ಸಂದರ್ಭದಲ್ಲಿ ಯುದ್ಧ ತಂತ್ರಕ್ಕಾಗಿ ಅಥವಾ ಬೇರೆ ಸೈನ್ಯದೊಂದಿಗೆ ಹೋಗಿ ಸೇರಿಕೊಳ್ಳಲಿಕ್ಕಾಗಿ ಹೊರತು ಯಾರಾದರೂ ಹಿಮ್ಮೆಟ್ಟಿದರೆ- ಅವನು ಅಲ್ಲಾಹನ ಕ್ರೋಧದಿಂದ ಆವರಿಸಲ್ಪಡುವನು. ಅವನ ವಾಸಸ್ಥಾನವು 'ನರಕ' ಆಗಿರುವುದು. ಅದು ಹಿಂತೆರಳುವ ಅತಿ ನಿಕೃಷ್ಟ ತಾಣ.

وَمَن يُوَلِّهِمْ يَوْمَئِذٍ دُبُرَهُۥٓ إِلَّا مُتَحَرِّفًا
لِّقِتَالٍ أَوْ مُتَحَيِّزًا إِلَىٰ فِئَةٍ فَقَدْ بَآءَ بِغَضَبٍ
مِّنَ ٱللَّهِ وَمَأْوَىٰهُ جَهَنَّمُ ۖ وَبِئْسَ ٱلْمَصِيرُ ﴿١٦﴾

17. ನೀವು ಅವರನ್ನು ವಧಿಸಲಿಲ್ಲ. ನಿಜವಾಗಿ ಅಲ್ಲಾಹನು ಅವರನ್ನು ವಧಿಸಿದನು. ಓ ಪೈಗಂಬರರೇ, ನೀವು ಎಸೆದುದಲ್ಲ. ನಿಜವಾಗಿ ಅಲ್ಲಾಹನು ಎಸೆದನು.[7] ಇದು (ಸತ್ಯವಿಶ್ವಾಸಿಗಳ ಕೈಗಳು ಈ ಕಾರ್ಯಕ್ಕಾಗಿ ಬಳಸಲ್ಪಟ್ಟದ್ದು) ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಒಂದು ಅತ್ಯುತ್ತಮ ಪರೀಕ್ಷೆಯಿಂದ ಜಯಪ್ರದವಾಗಿ ಪಾರುಗಾಣಿಸಲಿಕ್ಕಾಗಿತ್ತು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

فَلَمْ تَقْتُلُوهُمْ وَلَٰكِنَّ ٱللَّهَ قَتَلَهُمْ ۚ وَمَا
رَمَيْتَ إِذْ رَمَيْتَ وَلَٰكِنَّ ٱللَّهَ رَمَىٰ ۚ
وَلِيُبْلِىَ ٱلْمُؤْمِنِينَ مِنْهُ بَلَآءً حَسَنًا ۚ
إِنَّ ٱللَّهَ سَمِيعٌ عَلِيمٌ ﴿١٧﴾

18. ಇದಂತು ನಿಮ್ಮೊಂದಿಗಿನ ವ್ಯವಹಾರವಾಯಿತು ಮತ್ತು ಸತ್ಯನಿಷೇಧಿಗಳೊಂದಿಗಿನ ವ್ಯವಹಾರವೇನೆಂದರೆ ನಿಶ್ಚಯವಾಗಿಯೂ ಅಲ್ಲಾಹನು ಅವರ ಕುತಂತ್ರಗಳನ್ನು ದುರ್ಬಲಗೊಳಿಸಿ ಬಿಡುವನು.

ذَٰلِكُمْ وَأَنَّ ٱللَّهَ مُوهِنُ كَيْدِ ٱلْكَٰفِرِينَ ﴿١٨﴾

19. (ಈ ಸತ್ಯನಿಷೇಧಿಗಳೊಡನೆ ಹೇಳಿಬಿಡಿರಿ) "ನೀವು ತೀರ್ಮಾನವನ್ನೇ ಬಯಸುತ್ತೀರಾದರೆ, ಇದೋ ತೀರ್ಮಾನವು ನಿಮ್ಮ ಮುಂದೆ ಬಂದು ಬಿಟ್ಟಿತು.[8] ಈಗ ಹಿಮ್ಮೆಟ್ಟಿದರೆ ನಿಮಗೇ ಒಳಿತು. ಮುಂದೆ ಇದನ್ನೇ ಪುನರಾವರ್ತಿಸಿದರೆ ನಾವೂ ಇದೇ ಶಿಕ್ಷೆಯನ್ನು ಪುನರಾವರ್ತಿಸುವೆವು. ನಿಮ್ಮ ಜನಬಲವು ಅದೆಷ್ಟೇ ದೊಡ್ಡದಿದ್ದರೂ ನಿಮಗೇನೂ ಪ್ರಯೋಜನವಾಗದು. ಅಲ್ಲಾಹನು ಸತ್ಯವಿಶ್ವಾಸಿಗಳೊಂದಿಗೆ ಇದ್ದಾನೆ."

إِن تَسْتَفْتِحُوا۟ فَقَدْ جَآءَكُمُ ٱلْفَتْحُ ۖ وَإِن
تَنتَهُوا۟ فَهُوَ خَيْرٌ لَّكُمْ ۖ وَإِن تَعُودُوا۟ نَعُدْ
وَلَن تُغْنِىَ عَنكُمْ فِئَتُكُمْ شَيْـًٔا وَلَوْ كَثُرَتْ
وَأَنَّ ٱللَّهَ مَعَ ٱلْمُؤْمِنِينَ ﴿١٩﴾

7. ಬದ್ರ್ ಯುದ್ಧದ ವೇಳೆ ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ಪರಸ್ಪರ ಎದುರ್ಗೊಂಡು ಯುದ್ಧವು ಭೀಕರ ಹಂತಕ್ಕೆ ತಲಪಿದಾಗ ಪ್ರವಾದಿವರ್ಯರು(ಸ) 'ಶಾಹತಿಲ್ ವುಜೂಹ್' ಎನ್ನುತ್ತಾ ಹಿಡಿ ಮಣ್ಣನ್ನು ಸತ್ಯನಿಷೇಧಿಗಳ ಕಡೆಗೆ ಎಸೆದರು. ಅದರ ಜತೆಗೆ ಪ್ರವಾದಿವರ್ಯರ(ಸ) ಸೂಚನೆಯಂತೆ ಮುಸ್ಲಿಮರು ಒಮ್ಮೆಲೆ ಸತ್ಯನಿಷೇಧಿಗಳ ಮೇಲೆ ಮುಗಿ ಬಿದ್ದರು. ಈ ಘಟನೆಯ ಕಡೆಗೇ ಇಲ್ಲಿ ಸೂಚಿಸಲಾಗುತ್ತಿದೆ. ಅರ್ಥಾತ್ ಕೈ ಪ್ರವಾದಿವರ್ಯರದ್ದಾಗಿದ್ದರೂ(ಸ) ಪೆಟ್ಟು ಅಲ್ಲಾಹನ ಕಡೆಯಿಂದಾಗಿತ್ತು.

8. ಮಕ್ಕಾದಿಂದ ಹೊರಡುವಾಗ ಬಹುದೇವಾರಾಧಕರು ಕಅಬಾದ ಪರದೆ ಹಿಡಿದು, "ದೇವಾ! ಎರಡು ಗುಂಪುಗಳ ಪೈಕಿ ಉತ್ತಮವಾದುದಕ್ಕೆ ಜಯ ದಯಪಾಲಿಸು" ಎಂದು ಪ್ರಾರ್ಥಿಸಿದ್ದರು.

20. ಓ ಸತ್ಯವಿಶ್ವಾಸಿಗಳೇ, ಅಲ್ಲಾಹ್ ಮತ್ತು ಅವನ ರಸೂಲರನ್ನು ಅನುಸರಿಸಿರಿ. ಆಜ್ಞೆಯನ್ನು ಕೇಳಿಯೂ ಅದರಿಂದ ವಿಮುಖರಾಗಬೇಡಿರಿ.

يَـٰٓأَيُّهَا ٱلَّذِينَ ءَامَنُوٓا۟ أَطِيعُوا۟ ٱللَّهَ وَرَسُولَهُۥ وَلَا تَوَلَّوْا۟ عَنْهُ وَأَنتُمْ تَسْمَعُونَ ٢٠

21. ಆಲಿಸದೆಯೇ 'ನಾವು ಆಲಿಸಿದೆವು' ಎನ್ನುವವರಂತೆ ನೀವಾಗಬೇಡಿರಿ.

وَلَا تَكُونُوا۟ كَٱلَّذِينَ قَالُوا۟ سَمِعْنَا وَهُمْ لَا يَسْمَعُونَ ٢١

22. ವಾಸ್ತವದಲ್ಲಿ ಬುದ್ಧಿ ಶಕ್ತಿಯಿಂದ ಪ್ರಯೋಜನ ಪಡೆಯದ ಕಿವುಡ-ಮೂಕ ಜನರೇ ಅಲ್ಲಾಹನ ಬಳಿ ಅತ್ಯಂತ ಕೀಳ್ತರದ ಪ್ರಾಣಿಗಳು.

إِنَّ شَرَّ ٱلدَّوَآبِّ عِندَ ٱللَّهِ ٱلصُّمُّ ٱلْبُكْمُ ٱلَّذِينَ لَا يَعْقِلُونَ ٢٢

23. ಅವರಲ್ಲಿ ಕಿಂಚಿತ್ತಾದರೂ ಒಳಿತಿದೆಯೆಂದು ಅಲ್ಲಾಹನಿಗೆ ತಿಳಿಯುತ್ತಿದ್ದರೆ ನಿಶ್ಚಯವಾಗಿಯೂ ಅವನು ಅವರಿಗೆ ಕೇಳುವ ದಿವ್ಯಾನುಗ್ರಹ ನೀಡುತ್ತಿದ್ದನು. (ಆದರೆ, ಅವರಲ್ಲಿ ಒಳಿತೇ ಇಲ್ಲದಿರುವಾಗ) ಅವನು ಅವರಿಗೆ ಕೇಳಿಸುತ್ತಿದ್ದರೂ ಅವರು ಅಶ್ರದ್ಧೆಯೊಂದಿಗೆ ಮುಖವನ್ನು ತಿರುಗಿಸಿಬಿಡುತ್ತಿದ್ದರು.

وَلَوْ عَلِمَ ٱللَّهُ فِيهِمْ خَيْرًا لَّأَسْمَعَهُمْ ۖ وَلَوْ أَسْمَعَهُمْ لَتَوَلَّوا۟ وَّهُم مُّعْرِضُونَ ٢٣

24. ಓ ಸತ್ಯವಿಶ್ವಾಸಿಗಳೇ, ನಿಮಗೆ ಚೇತನ ನೀಡುವಂತಹ ವಿಷಯದ ಕಡೆಗೆ ಅಲ್ಲಾಹ್ ಮತ್ತು ರಸೂಲರು ನಿಮ್ಮನ್ನು ಕರೆದಾಗ 'ಓ'ಗೊಡಿರಿ. ಅಲ್ಲಾಹ್ ಮನುಷ್ಯನ ಮತ್ತು ಅವನ ಹೃದಯದ ನಡುವೆ ಇದ್ದಾನೆಂದೂ ನೀವು ಅವನ ಕಡೆಗೆ ಒಟ್ಟು ಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ.

يَـٰٓأَيُّهَا ٱلَّذِينَ ءَامَنُوا۟ ٱسْتَجِيبُوا۟ لِلَّهِ وَلِلرَّسُولِ إِذَا دَعَاكُمْ لِمَا يُحْيِيكُمْ ۖ وَٱعْلَمُوٓا۟ أَنَّ ٱللَّهَ يَحُولُ بَيْنَ ٱلْمَرْءِ وَقَلْبِهِۦ وَأَنَّهُۥٓ إِلَيْهِ تُحْشَرُونَ ٢٤

25. ಯಾವುದರ ಪರಿಣಾಮವು ನಿಮ್ಮ ಪೈಕಿ ಪಾಪ ಮಾಡಿದವರಿಗೆ ಮಾತ್ರ ಸೀಮಿತವಾಗಿರಲಾರದೋ ಆ 'ಪೀಡನ'ದಿಂದ ನೀವು ದೂರವಿರಿ.[9] ಅಲ್ಲಾಹ್ ಕಠಿಣವಾಗಿ ಶಿಕ್ಷಿಸುವವನೆಂಬುದನ್ನು ತಿಳಿದುಕೊಳ್ಳಿರಿ.

وَٱتَّقُوا۟ فِتْنَةً لَّا تُصِيبَنَّ ٱلَّذِينَ ظَلَمُوا۟ مِنكُمْ خَآصَّةً ۖ وَٱعْلَمُوٓا۟ أَنَّ ٱللَّهَ شَدِيدُ ٱلْعِقَابِ ٢٥

26. ನೀವು ಕಡಿಮೆ ಸಂಖ್ಯೆಯಲ್ಲಿದ್ದು ಭೂಮಿಯಲ್ಲಿ ನಿಮ್ಮನ್ನು ಬಲಹೀನರೆಂದು ಪರಿಗಣಿಸಲಾಗುತ್ತಿದ್ದ ಆ ಕಾಲವನ್ನು ಜ್ಞಾಪಿಸಿರಿ. ಜನರು ನಿಮ್ಮನ್ನು ಅಳಿಸಿಬಿಡಬಹುದೆಂದು ನೀವು ಶಂಕಿಸುತ್ತಿದ್ದಿರಿ. ಅನಂತರ ಅಲ್ಲಾಹನು ನಿಮಗೆ ಆಶ್ರಯ ಸ್ಥಾನವನ್ನು ಒದಗಿಸಿದನು. ತನ್ನ ಸಹಾಯದಿಂದ ನಿಮ್ಮನ್ನು ಬಲಪಡಿಸಿದನು ಮತ್ತು ನಿಮಗೆ

وَٱذْكُرُوٓا۟ إِذْ أَنتُمْ قَلِيلٌ مُّسْتَضْعَفُونَ فِى ٱلْأَرْضِ تَخَافُونَ أَن يَتَخَطَّفَكُمُ ٱلنَّاسُ فَـَٔاوَىٰكُمْ وَأَيَّدَكُم بِنَصْرِهِۦ وَرَزَقَكُم مِّنَ ٱلطَّيِّبَـٰتِ لَعَلَّكُمْ تَشْكُرُونَ ٢٦

9. ಅರ್ಥಾತ್- ಸಾರ್ವತ್ರಿಕ ಪಿಡುಗಿನ ರೂಪದಲ್ಲಿ ಬಾಧಿಸುವ ಸಾಮೂಹಿಕ ಕ್ಷೋಭೆಗಳಾಗಿವೆ. ಅದರ ಸುಳಿಯಲ್ಲಿ ಅಪರಾಧಿಗಳು ಮಾತ್ರವಲ್ಲ ಅಪರಾಧಮಯ ಸಮಾಜದಲ್ಲಿ ಬದುಕುವುದನ್ನು ನೆಚ್ಚಿಕೊಂಡವರೂ ಸಿಕ್ಕಿಬಿಡುತ್ತಾರೆ.

ಉತ್ತಮ ಜೀವನಾಧಾರ ಒದಗಿಸಿದನು. (ಇದು) ನೀವು ಕೃತಜ್ಞರಾಗಬಹುದೆಂದು.

27. ಓ ಸತ್ಯವಿಶ್ವಾಸಿಗಳೇ, ತಿಳುವಳಿಕೆ ಇದ್ದೂ ಅಲ್ಲಾಹ್ ಮತ್ತು ರಸೂಲರೊಂದಿಗೆ ವಿಶ್ವಾಸಘಾತಕವೆಸಗಬೇಡಿರಿ ಮತ್ತು ನಿಮ್ಮ ಅಮಾನತ್[10](ವಿಶ್ವಸ್ಥನಿಧಿ)ಗಳಲ್ಲಿ ವಿದ್ರೋಹವೆಸಗಬೇಡಿರಿ.

يَٰٓأَيُّهَا ٱلَّذِينَ ءَامَنُوا۟ لَا تَخُونُوا۟ ٱللَّهَ وَ
ٱلرَّسُولَ وَتَخُونُوٓا۟ أَمَٰنَٰتِكُمْ وَأَنتُمْ تَعْلَمُونَ ٢٧

28. ನಿಮ್ಮ ಸೊತ್ತುಗಳು ಮತ್ತು ನಿಮ್ಮ ಸಂತತಿಗಳು ವಾಸ್ತವದಲ್ಲಿ ಪರೀಕ್ಷಾ ಸಾಧನಗಳೆಂದೂ ಪ್ರತಿಫಲ ನೀಡಲು ಅಲ್ಲಾಹನ ಬಳಿ ಬೇಕಾದಷ್ಟಿದೆಯೆಂದೂ ತಿಳಿದುಕೊಳ್ಳಿರಿ.

وَٱعْلَمُوٓا۟ أَنَّمَآ أَمْوَٰلُكُمْ وَأَوْلَٰدُكُمْ فِتْنَةٌ
وَّأَنَّ ٱللَّهَ عِندَهُۥٓ أَجْرٌ عَظِيمٌ ٢٨

29. ಓ ಸತ್ಯವಿಶ್ವಾಸಿಗಳೇ, ನೀವು ದೇವಭಯವನ್ನಿರಿಸಿಕೊಂಡರೆ ಅಲ್ಲಾಹನು ನಿಮಗೊಂದು ಒರೆಗಲ್ಲನ್ನು[11] ಒದಗಿಸುವನು. ನಿಮ್ಮ ದೋಷಗಳನ್ನು ನಿಮ್ಮಿಂದ ದೂರೀಕರಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು. ಅಲ್ಲಾಹ್ ಮಹಾ ಅನುಗ್ರಹದಾನಿಯಾಗಿರುತ್ತಾನೆ.

يَٰٓأَيُّهَا ٱلَّذِينَ ءَامَنُوٓا۟ إِن تَتَّقُوا۟ ٱللَّهَ يَجْعَل
لَّكُمْ فُرْقَانًا وَيُكَفِّرْ عَنكُمْ سَيِّـَٔاتِكُمْ
وَيَغْفِرْ لَكُمْ ۗ وَٱللَّهُ ذُو ٱلْفَضْلِ ٱلْعَظِيمِ ٢٩

30. ಸತ್ಯನಿಷೇಧಿಗಳು ನಿಮ್ಮನ್ನು ಸೆರೆಹಿಡಿಯಲಿಕ್ಕೆ ಅಥವಾ ವಧಿಸಲಿಕ್ಕೆ ಅಥವಾ ದೇಶಭ್ರಷ್ಟ ಗೊಳಿಸಲಿಕ್ಕೆ ಗೂಢಾಲೋಚನೆ ನಡೆಸುತ್ತಿದ್ದ ಕಾಲವೂ ಸ್ಮರಣೀಯವಾಗಿದೆ.[12] ಅವರು ತಮ್ಮ ಕುತಂತ್ರಗಳನ್ನು ನಡೆಸುತ್ತಿದ್ದರು. ಅಲ್ಲಾಹನು ತನ್ನ ತಂತ್ರ ಹೂಡುತ್ತಿದ್ದನು ಮತ್ತು ಅಲ್ಲಾಹ್ ಅತ್ಯುತ್ತಮ ತಂತ್ರಜ್ಞನಾಗಿರುತ್ತಾನೆ.

وَإِذْ يَمْكُرُ بِكَ ٱلَّذِينَ كَفَرُوا۟ لِيُثْبِتُوكَ
أَوْ يَقْتُلُوكَ أَوْ يُخْرِجُوكَ ۚ وَيَمْكُرُونَ
وَيَمْكُرُ ٱللَّهُ ۖ وَٱللَّهُ خَيْرُ ٱلْمَٰكِرِينَ ٣٠

31. ಅವರಿಗೆ ನಮ್ಮ ವಚನಗಳನ್ನು ಓದಿ ಹೇಳಿದಾಗ ಅವರು,

وَإِذَا تُتْلَىٰ عَلَيْهِمْ ءَايَٰتُنَا قَالُوا۟ قَدْ سَمِعْنَا

10. 'ಅಮಾನತ್ತುಗಳು' ಎಂದರೆ ಒಬ್ಬನ ಮೇಲೆ ವಿಶ್ವಾಸ ತಾಳಿ ಅವನಿಗೆ ವಹಿಸಿಕೊಡಲಾಗುವ ಎಲ್ಲಾ ಜವಾಬ್ದಾರಿಕೆಗಳಾಗಿವೆ. ಅದು ಕರಾರನ್ನು ಈಡೇರಿಸುವುದು, ಸಾಮೂಹಿಕ ಸಂಧಾನ ಮಾಡಿಸುವುದು, ಸಮೂಹದ ರಹಸ್ಯ ಪಾಲನೆ ಮಾಡುವುದು, ವೈಯಕ್ತಿಕ ಅಥವಾ ಸಾಮೂಹಿಕ ಸೊತ್ತಿನ ಮೇಲ್ನೋಟ ವಹಿಸುವುದು, ಯಾವುದೇ ಪದವಿ ಅಥವಾ ಹುದ್ದೆಯನ್ನು ಸ್ವೀಕರಿಸುವುದು ಮುಂತಾದ ವ್ಯಕ್ತಿಯ ಮೇಲಿನ ಭರವಸೆಯೊಂದಿಗೆ ಸಮಾಜ ಅವನಿಗೆ ನೀಡುವಂತಹ ಯಾವುದೇ ಹೊಣೆಗಾರಿಕೆಯಾಗಿರಬಹುದು.

11. ಅಸಲಿ-ನಕಲಿಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸುವ ವಸ್ತುವಿಗೆ ಒರೆಗಲ್ಲು ಎನ್ನಲಾಗುತ್ತದೆ. 'ಫುರ್‌ಕಾನ್'ನ ವ್ಯಾಖ್ಯಾನವೂ ಅದೇ ಆಗಿದೆ. ಆದ್ದರಿಂದಲೇ ನಾವು ಅದನ್ನು 'ಒರೆಗಲ್ಲು' ಎಂದು ಭಾಷಾಂತರಿಸಿದ್ದೇವೆ. ಲೋಕದಲ್ಲಿ ಅಲ್ಲಾಹನನ್ನು ಭಯಪಡುತ್ತಾ ಜೀವಿಸಿದರೆ, ಹೆಜ್ಜೆ ಹೆಜ್ಜೆಗೂ ಯಾವುದು ಸರಿ, ಯಾವುದು ತಪ್ಪು, ಸತ್ಯ ಮತ್ತು ದೇವನೆಡೆಗೆ ಕೊಂಡೊಯ್ಯುವ ಮಾರ್ಗ ಯಾವುದು ಹಾಗೂ ಮಿಥ್ಯಾಧಾರಿತ ಪಿಶಾಚಿಯೆಡೆಗೆ ಕೊಂಡೊಯ್ಯುವ ಮಾರ್ಗ ಯಾವುದು ಎಂದು ಸ್ವತಃ ಅರಿತುಕೊಳ್ಳುವಂತಹ ಶಕ್ತಿಯನ್ನು ಅಲ್ಲಾಹನು ನಿಮ್ಮಲ್ಲಿ ಬೆಳೆಸುವನು.

12. ಇನ್ನು ಮುಹಮ್ಮದ್‌ರೂ(ಸ) ಮದೀನಾಕ್ಕೆ ಹೊರಟು ಹೋಗಲಿದ್ದಾರೆ ಎಂಬ ಕುರೈಶರ ಶಂಕೆ ನಿಜಗೊಳ್ಳುವ ಹಂತಕ್ಕೆ ತಲಪಿದ ಸಂದರ್ಭವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ವ್ಯಕ್ತಿ ಮಕ್ಕಾದಿಂದ ಹೊರಟು ಹೋದರೆ ಅಪಾಯ ಮಿತಿಮೀರಿ ಹೋಗುವುದು ಎಂದು ಆಗ ಅವರು ಪರಸ್ಪರ ಆಡಿಕೊಳ್ಳತೊಡಗಿದರು. ಆದ್ದರಿಂದ ಅವರ ಬಗ್ಗೆ ಅಂತಿಮ ತೀರ್ಮಾನ ತಳೆಯಲಿಕ್ಕಾಗಿ ಅವರು ಸಭೆಯೊಂದನ್ನು ಕರೆದರು. ಈ ಅಪಾಯವನ್ನು ನೀಗಿಸುವುದು ಹೇಗೆ ಎಂಬ ಬಗ್ಗೆ ಅವರು ಪರಸ್ಪರ ಸಮಾಲೋಚನೆ ನಡೆಸಿದರು.

"ಹೌದು, ನಾವು ಕೇಳಿದೆವು. ನಾವು ಇಚ್ಛಿಸಿದರೆ ಇಂತಹ ಮಾತುಗಳನ್ನು ನಾವೂ ಸೃಷ್ಟಿಸಿ ಹೇಳಬಲ್ಲೆವು. ಇವು ಹಿಂದಿನಿಂದಲೇ ಜನರು ಹೇಳುತ್ತಾ ಬಂದಿರುವ ಕಟ್ಟುಕಥೆಗಳಲ್ಲದೆ ಇನ್ನೇನೂ ಅಲ್ಲ" ಎನ್ನುತ್ತಿದ್ದರು.

لَوْ نَشَآءُ لَقُلْنَا مِثْلَ هٰذَآ ۙ اِنْ هٰذَآ اِلَّآ
اَسَاطِيْرُ الْاَوَّلِيْنَ ۝٣١

32. "ದೇವಾ, ಇದು ನಿಜವಾಗಿಯೂ ನಿನ್ನ ಕಡೆಯಿಂದ ಬಂದ ಸತ್ಯವಾಗಿದ್ದರೆ ನಮ್ಮ ಮೇಲೆ ಆಕಾಶದಿಂದ ಕಲ್ಲಿನ ಮಳೆಗರೆಸು ಅಥವಾ ಇನ್ನಾವುದಾದರೂ ವೇದನಾತ್ಮಕ ಶಿಕ್ಷೆಯನ್ನು ತಾ" ಎಂದು ಹೇಳಿದ್ದ ಮಾತೂ ಜ್ಞಾಪಕದಲ್ಲಿದೆ.

وَاِذْ قَالُوا اللّٰهُمَّ اِنْ كَانَ هٰذَا هُوَ الْحَقَّ
مِنْ عِنْدِكَ فَاَمْطِرْ عَلَيْنَا حِجَارَةً مِّنَ
السَّمَآءِ اَوِ ائْتِنَا بِعَذَابٍ اَلِيْمٍ ۝٣٢

33. ನೀವು ಅವರೊಂದಿಗೆ ಇರುವಾಗ ಅಲ್ಲಾಹ್ ಅವರ ಮೇಲೆ ಯಾತನೆ ಇಳಿಸುವವನಿರಲಿಲ್ಲ. ಜನರು ಕ್ಷಮಾಯಾಚನೆ ಮಾಡುತ್ತಿರುವಾಗ ಅವರನ್ನು ಶಿಕ್ಷಿಸುವುದೂ ಅಲ್ಲಾಹನ ರೂಢಿಯಲ್ಲ.

وَمَا كَانَ اللّٰهُ لِيُعَذِّبَهُمْ وَاَنْتَ فِيْهِمْ ۭ
وَمَا كَانَ اللّٰهُ مُعَذِّبَهُمْ وَهُمْ يَسْتَغْفِرُوْنَ ۝٣٣

34. ಆದರೆ ಈಗ ಅವರು 'ಮಸ್ಜಿದುಲ್ ಹರಾಮ್'ನ ದಾರಿಯನ್ನು ತಡೆಯುತ್ತಿರುವಾಗ ಅವರ ಮೇಲೆ ಯಾತನೆಯನ್ನೇಕೆ ಇಳಿಸಬಾರದು? ವಸ್ತುತಃ ಅವರು ಆ ಮಸೀದಿಯ ಅರ್ಹ ವ್ಯವಸ್ಥಾಪಕರಲ್ಲ. ಅದರ ಅರ್ಹ ವ್ಯವಸ್ಥಾಪಕರು ಧರ್ಮನಿಷ್ಠರು ಮಾತ್ರವೇ ಆಗಬಲ್ಲರು. ಆದರೆ ಹೆಚ್ಚಿನವರು ಇದನ್ನು ತಿಳಿಯುವುದಿಲ್ಲ.

وَمَا لَهُمْ اَلَّا يُعَذِّبَهُمُ اللّٰهُ وَهُمْ يَصُدُّوْنَ
عَنِ الْمَسْجِدِ الْحَرَامِ وَمَا كَانُوْٓا اَوْلِيَآءَهٗ ۭ
اِنْ اَوْلِيَآؤُهٗٓ اِلَّا الْمُتَّقُوْنَ وَلٰكِنَّ اَكْثَرَهُمْ
لَا يَعْلَمُوْنَ ۝٣٤

35. ಕಅಬಾದ ಬಳಿ ಅವರ ನಮಾಝ್ ಕೇವಲ ಸಿಳ್ಳು ಹೊಡೆಯುವುದು, ಕೈ ಚಪ್ಪಾಳೆ ಹೊಡೆಯುವುದು ಹೊರತು ಇನ್ನೇನೂ ಅಲ್ಲ. ಆದುದರಿಂದ ಇದೋ ನೀವು ಸತ್ಯವನ್ನು ನಿಷೇಧಿಸಿದುದರ ಫಲವಾಗಿ ಈಗ ಯಾತನೆಯ ಸವಿಯನ್ನುಣ್ಣಿರಿ.

وَمَا كَانَ صَلَاتُهُمْ عِنْدَ الْبَيْتِ اِلَّا
مُكَآءً وَّتَصْدِيَةً ۭ فَذُوْقُوا الْعَذَابَ بِمَا
كُنْتُمْ تَكْفُرُوْنَ ۝٣٥

36. ವಾಸ್ತವದಲ್ಲಿ ಸತ್ಯನಿಷೇಧಿಗಳು ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯಲಿಕ್ಕಾಗಿ ತಮ್ಮ ಸಂಪತ್ತನ್ನು ವಿನಿಯೋಗಿಸುತ್ತಾರೆ. ಅವರು ಇನ್ನು ಮುಂದೆಯೂ ಇನ್ನಷ್ಟು ಖರ್ಚು ಮಾಡುತ್ತಿರುವರು. ಕೊನೆಗೆ ಈ ಪರಿಶ್ರಮಗಳೇ ಅವರಿಗೆ ವಿಷಾದದ ಕಾರಣಗಳಾಗುವುವು. ಅನಂತರ ಅವರು ಪರಾಜಿತರಾಗುವರು. ಈ ಸತ್ಯನಿಷೇಧಿಗಳು ನರಕದ ಕಡೆಗೆ ಸುತ್ತುಗಟ್ಟಿ ತರಲ್ಪಡುವರು.

اِنَّ الَّذِيْنَ كَفَرُوْا يُنْفِقُوْنَ اَمْوَالَهُمْ لِيَصُدُّوْا
عَنْ سَبِيْلِ اللّٰهِ ۭ فَسَيُنْفِقُوْنَهَا ثُمَّ تَكُوْنُ
عَلَيْهِمْ حَسْرَةً ثُمَّ يُغْلَبُوْنَ ڛ وَالَّذِيْنَ كَفَرُوْٓا
اِلٰى جَهَنَّمَ يُحْشَرُوْنَ ۝٣٦

37. ಇದು ಅಲ್ಲಾಹ್ ಮಾಲಿನ್ಯವನ್ನು ನೈರ್ಮಲ್ಯದಿಂದ ಬೇರ್ಪಡಿಸಲಿಕ್ಕಾಗಿಯೂ ಎಲ್ಲಾ ವಿಧದ ಮಾಲಿನ್ಯಗಳನ್ನು

لِيَمِيْزَ اللّٰهُ الْخَبِيْثَ مِنَ الطَّيِّبِ وَيَجْعَلَ
الْخَبِيْثَ بَعْضَهٗ عَلٰى بَعْضٍ فَيَرْكُمَهٗ جَمِيْعًا

ಒಟ್ಟುಗೂಡಿಸಿ ಆ ಮೂಟೆಯನ್ನು 'ನರಕದಲ್ಲಿ' ತಳ್ಳಿಬಿಡಲಿಕ್ಕಾಗಿಯೂ ಆಗಿರುತ್ತದೆ. ಇವರೇ ನಿಜವಾಗಿ ನಷ್ಟಹೊಂದಿದವರು.

فَيَجْعَلَهُ فِي جَهَنَّمَ ۚ أُولَٰئِكَ هُمُ الْخَاسِرُونَ ﴿٣٧﴾

38. ಓ ಪೈಗಂಬರರೇ, ಈ ಸತ್ಯನಿಷೇಧಿಗಳೊಡನೆ ಹೇಳಿರಿ:- "ಈಗಲಾದರೂ ನೀವು ಹಿಂಜರಿದರೆ ಹಿಂದೆ ಸಂಭವಿಸಿ ಹೋದುದನ್ನು ಕಡೆಗಣಿಸಲಾಗುವುದು." ಆದರೆ ಇವರು ಮುಂಚಿನ ನೀತಿಯನ್ನೇ ಪುನರಾವರ್ತಿಸಿದರೆ ಗತ ಜನಾಂಗಗಳ ಮೇಲೆ ಏನೆಲ್ಲ ಸಂಭವಿಸಿದೆಯೆಂಬುದು ಎಲ್ಲರಿಗೂ ತಿಳಿದೇ ಇದೆ.

قُل لِّلَّذِينَ كَفَرُوا إِن يَنتَهُوا يُغْفَرْ
لَهُم مَّا قَدْ سَلَفَ وَإِن يَعُودُوا فَقَدْ
مَضَتْ سُنَّتُ الْأَوَّلِينَ ﴿٣٨﴾

39. ಓ ಸತ್ಯವಿಶ್ವಾಸಿಗಳೇ, 'ಫಿತ್ನ'(ಕ್ಷೋಭೆ) ಅಳಿದು ಹೋಗುವ ವರೆಗೂ 'ಧರ್ಮ'(ದೀನ್) ಸರ್ವಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವ ವರೆಗೂ ಈ ಸತ್ಯನಿಷೇಧಿಗಳೊಡನೆ ಹೋರಾಡಿರಿ. ಹಾಗೆ ಅವರು 'ಪೀಡನ' ದಿಂದ ತಡೆದು ನಿಂತರೆ ಅವರ ಕರ್ಮಗಳನ್ನು ವೀಕ್ಷಿಸುವವನು ಅಲ್ಲಾಹನಾಗಿರುತ್ತಾನೆ.

وَقَاتِلُوهُمْ حَتَّىٰ لَا تَكُونَ فِتْنَةٌ وَيَكُونَ
الدِّينُ كُلُّهُ لِلَّهِ ۚ فَإِنِ انتَهَوْا فَإِنَّ اللَّهَ
بِمَا يَعْمَلُونَ بَصِيرٌ ﴿٣٩﴾

40. ಅವರು ಒಪ್ಪದಿದ್ದರೆ ಅಲ್ಲಾಹ್ ನಿಮ್ಮ ಸಂರಕ್ಷಕನೆಂದೂ ಅವನು ಅತ್ಯುತ್ತಮ ರಕ್ಷಕನೂ ಸಹಾಯಕನೂ ಆಗಿರುತ್ತಾನೆಂದೂ ತಿಳಿದುಕೊಳ್ಳಿರಿ.

وَإِن تَوَلَّوْا فَاعْلَمُوا أَنَّ اللَّهَ مَوْلَاكُمْ ۚ
نِعْمَ الْمَوْلَىٰ وَنِعْمَ النَّصِيرُ ﴿٤٠﴾

41. *ನೀವು ಗಳಿಸಿದ ಯಾವುದೇ ಸಮರಾರ್ಜಿತ ಸೊತ್ತಿನ[13] ಐದನೆಯ ಒಂದಂಶವು ಅಲ್ಲಾಹನಿಗೆ, ಅವನ ಸಂದೇಶವಾಹಕರಿಗೆ, ಸಂಬಂಧಿಕರಿಗೆ, ಅನಾಥರಿಗೆ, ನಿರ್ಗತಿಕರಿಗೆ ಮತ್ತು ಪ್ರಯಾಣಿಕರಿಗಾಗಿರುತ್ತದೆ ಎಂಬುದು ನಿಮಗೆ ತಿಳಿದಿರಬೇಕು. ನೀವು ಅಲ್ಲಾಹನ ಮೇಲೆ ಮತ್ತು ನಿಷ್ಕರ್ಷೆಯ ದಿನ ಅರ್ಥಾತ್ ಎರಡು ಸೇನೆಗಳು ಎದುರ್ಗೊಂಡ ದಿನ ನಾವು ನಮ್ಮ ದಾಸನ ಮೇಲೆ ಅವತೀರ್ಣಗೊಳಿಸಿದುದರ ಮೇಲೆ ವಿಶ್ವಾಸವಿಟ್ಟಿದ್ದರೆ[14] (ಈ ಪಾಲನ್ನು ಹೃತ್ಪೂರ್ವಕವಾಗಿ ಸಂದಾಯ ಮಾಡಿರಿ) ಅಲ್ಲಾಹನು ಪ್ರತಿಯೊಂದು ವಿಷಯದ ಸಾಮರ್ಥ್ಯವುಳ್ಳವನು.

وَاعْلَمُوا أَنَّمَا غَنِمْتُم مِّن شَيْءٍ فَأَنَّ لِلَّهِ
خُمُسَهُ وَلِلرَّسُولِ وَلِذِي الْقُرْبَىٰ وَالْيَتَامَىٰ
وَالْمَسَاكِينِ وَابْنِ السَّبِيلِ إِن كُنتُمْ آمَنتُم
بِاللَّهِ وَمَا أَنزَلْنَا عَلَىٰ عَبْدِنَا يَوْمَ الْفُرْقَانِ
يَوْمَ الْتَقَى الْجَمْعَانِ ۗ وَاللَّهُ عَلَىٰ كُلِّ شَيْءٍ قَدِيرٌ ﴿٤١﴾

42. ನೀವು ಕಣಿವೆಯ ಈ ಕಡೆಯಲ್ಲಿದ್ದ, ಅವರು ಆ ಕಡೆಯಲ್ಲಿ

إِذْ أَنتُم بِالْعُدْوَةِ الدُّنْيَا وَهُم بِالْعُدْوَةِ

***ಇಲ್ಲಿಂದ 10ನೆಯ ಕಾಂಡ ಆರಂಭ.**

13. ಉಪನ್ಯಾಸದ ಆರಂಭದಲ್ಲಿ ಸಮರಾರ್ಜಿತ ಸೊತ್ತಿನ ಬಗ್ಗೆ ಇದು ಅಲ್ಲಾಹನ ಅನುಗ್ರಹವಾಗಿದ್ದು ಅದರ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ಅಲ್ಲಾಹನಿಗೆ ಮತ್ತು ಅವನ ಪ್ರವಾದಿಗೆ ಮಾತ್ರವಿದೆ ಎಂದು ಹೇಳಲಾಗಿತ್ತು. ಇಲ್ಲಿ ಆ ತೀರ್ಮಾನ ಏನು ಎಂದು ಹೇಳಲಾಗುತ್ತಿದೆ ಮತ್ತು ಸಮರಾರ್ಜಿತ ಸೊತ್ತಿನ ವಿತರಣಾ ವಿಧಿಯನ್ನು ಗೊತ್ತುಪಡಿಸಲಾಗುತ್ತಿದೆ.

14. ಅರ್ಥಾತ್- ವಿಜಯ ಮತ್ತು ಸಮರಾರ್ಜಿತ ಸೊತ್ತಿನ ಪ್ರಾಪ್ತಿಗೆ ಕಾರಣವಾದ ಅಲ್ಲಾಹನ ಬೆಂಬಲ ಮತ್ತು ಸಹಾಯ.

ಬೀಡು ಬಿಟ್ಟಿದ್ದ ಮತ್ತು ವ್ಯಾಪಾರ ತಂಡವು ನಿಮಗಿಂತ ಕೆಳಗಡೆ (ಕರಾವಳಿಯ ಕಡೆ) ಇದ್ದ ಸಂದರ್ಭವನ್ನು ಸ್ಮರಿಸಿರಿ. ನಿಮ್ಮ ಮತ್ತು ಅವರ ನಡುವೆ ಮುಂಚಿತವಾಗಿಯೇ ಯುದ್ಧದ ಕರಾರಾಗಿರುತ್ತಿದ್ದರೆ, ನೀವು ಆ ಸಂದರ್ಭದಲ್ಲಿ ನಿಶ್ಚಯವಾಗಿಯೂ ನುಣುಚಿಕೊಳ್ಳುತ್ತಿದ್ದಿರಿ. ಆದರೆ ನಾಶ ಹೊಂದಬೇಕಾದವನು ಪ್ರತ್ಯಕ್ಷ ಪ್ರಮಾಣದೊಂದಿಗೆ ನಾಶಹೊಂದಬೇಕಿತ್ತು ಮತ್ತು ಜೀವಿಸಿರಬೇಕಾದವನು ಪ್ರತ್ಯಕ್ಷ ಪ್ರಮಾಣದೊಂದಿಗೆ ಜೀವಿಸಿರ ಬೇಕಿತ್ತು. ಅಲ್ಲಾಹನು ಮಾಡಿಕೊಂಡಿದ್ದ ಈ ನಿರ್ಧಾರವು ಪ್ರಕಟ ವಾಗಲಿಕ್ಕಾಗಿ ಇದೆಲ್ಲ ಸಂಭವಿಸಿತು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

الْقُصْوَىٰ وَالرَّكْبُ أَسْفَلَ مِنكُمْ ۚ وَلَوْ
تَوَاعَدتُّمْ لَاخْتَلَفْتُمْ فِي الْمِيعَادِ ۙ وَلَٰكِن
لِّيَقْضِيَ اللَّهُ أَمْرًا كَانَ مَفْعُولًا لِّيَهْلِكَ
مَنْ هَلَكَ عَن بَيِّنَةٍ وَيَحْيَىٰ مَنْ حَيَّ عَن
بَيِّنَةٍ ۗ وَإِنَّ اللَّهَ لَسَمِيعٌ عَلِيمٌ ﴿٤٢﴾

43. ಓ ಸಂದೇಶವಾಹಕರೇ, ಅಲ್ಲಾಹನು ಅವರನ್ನು ನಿಮ್ಮ ಸ್ವಪ್ನದಲ್ಲಿ ಕಡಿಮೆ ಸಂಖ್ಯೆಯಲ್ಲಿ ತೋರಿಸುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.[15] ಅವನು ನಿಮಗೆ ಅವರ ಸಂಖ್ಯೆಯನ್ನು ಅಧಿಕವಾಗಿ ತೋರಿಸು ತ್ತಿದ್ದರೆ, ನಿಶ್ಚಯವಾಗಿಯೂ ನೀವು ಧೈರ್ಯಗೆಡುತ್ತಿದ್ದಿರಿ ಮತ್ತು ಯುದ್ಧದ ವಿಷಯದಲ್ಲಿ ತರ್ಕಿಸಲಾರಂಭಿಸುತ್ತಿದ್ದಿರಿ. ಆದರೆ ಅಲ್ಲಾಹನೇ ನಿಮ್ಮನ್ನು ಇದರಿಂದ ರಕ್ಷಿಸಿದನು. ನಿಶ್ಚಯವಾಗಿಯೂ ಅವನು ಹೃದಯದಲ್ಲಿರುವುದನ್ನು ಅರಿಯುವವನಾಗಿರುತ್ತಾನೆ.

إِذْ يُرِيكَهُمُ اللَّهُ فِي مَنَامِكَ قَلِيلًا ۖ وَلَوْ
أَرَاكَهُمْ كَثِيرًا لَّفَشِلْتُمْ وَلَتَنَازَعْتُمْ
فِي الْأَمْرِ وَلَٰكِنَّ اللَّهَ سَلَّمَ ۗ إِنَّهُ
عَلِيمٌ بِذَاتِ الصُّدُورِ ﴿٤٣﴾

44. ಅಲ್ಲಾಹನು ಸಂಗ್ರಾಮದ ವೇಳೆ ನಿಮ್ಮ ದೃಷ್ಟಿಯಲ್ಲಿ ಶತ್ರುಗಳನ್ನು ಕಡಿಮೆಯಾಗಿಯೂ ಅವರ ದೃಷ್ಟಿಯಲ್ಲಿ ನಿಮ್ಮನ್ನು ಕಡಿಮೆ ಯಾಗಿಯೂ ತೋರಿಸಿ ಕೊಟ್ಟ ಸಂದರ್ಭವನ್ನು ಸ್ಮರಿಸಿರಿ. (ಇದು) ಸಂಭವಿಸಬೇಕಾಗಿದ್ದುದನ್ನು ಪ್ರಕಟಗೊಳಿಸಲಿಕ್ಕಾಗಿ, ಕಟ್ಟ ಕಡೆಗೆ ಸಕಲ ವ್ಯವಹಾರಗಳೂ ಅಲ್ಲಾಹನ ಕಡೆಗೇ ಮರಳುತ್ತವೆ.

وَإِذْ يُرِيكُمُوهُمْ إِذِ الْتَقَيْتُمْ فِي أَعْيُنِكُمْ
قَلِيلًا وَيُقَلِّلُكُمْ فِي أَعْيُنِهِمْ لِيَقْضِيَ اللَّهُ
أَمْرًا كَانَ مَفْعُولًا ۗ وَإِلَى اللَّهِ تُرْجَعُ الْأُمُورُ ﴿٤٤﴾

45. ಓ ಸತ್ಯವಿಶ್ವಾಸಿಗಳೇ, ಯಾವುದಾದರೊಂದು ತಂಡದೊಂದಿಗೆ ನಿಮ್ಮ ಹೋರಾಟ ನಡೆದರೆ ನೀವು ಸುಸ್ಥಿರರಾಗಿರಿ ಮತ್ತು ಅಲ್ಲಾಹನನ್ನು ಅತಿ ಹೆಚ್ಚಾಗಿ ಸ್ಮರಿಸಿರಿ. ನಿಮಗೆ ವಿಜಯ ಪ್ರಾಪ್ತಿ ಯಾದೀತೆಂದು ನಿರೀಕ್ಷಿಸಬಹುದು.

يَا أَيُّهَا الَّذِينَ آمَنُوا إِذَا لَقِيتُمْ فِئَةً فَاثْبُتُوا
وَاذْكُرُوا اللَّهَ كَثِيرًا لَّعَلَّكُمْ تُفْلِحُونَ ﴿٤٥﴾

46. ಅಲ್ಲಾಹ್ ಮತ್ತು ಅವನ ರಸೂಲರನ್ನು ಅನುಸರಿಸಿರಿ. ಪರಸ್ಪರ

وَأَطِيعُوا اللَّهَ وَرَسُولَهُ وَلَا تَنَازَعُوا فَتَفْشَلُوا

15. ಇದು ಪ್ರವಾದಿವರ್ಯರು(ಸ) ಮುಸ್ಲಿಮರ ಜತೆಗೆ ಮದೀನಾದಿಂದ ಹೊರಡುತ್ತಿದ್ದ ಅಥವಾ ಹೊರಟು ಯಾವುದೋ ಪ್ರದೇಶಕ್ಕೆ ತಲಪಿದ್ದ ಸಂದರ್ಭದ ಕುರಿತು ಹೇಳಲಾಗಿರುವ ಮಾತು. ಸತ್ಯನಿಷೇಧಿಗಳ ಸೇನೆ ಎಷ್ಟು ದೊಡ್ಡದು ಎಂದು ಆ ತನಕ ವ್ಯಕ್ತವಾಗಿರಲಿಲ್ಲ. ಆಗ ಪ್ರವಾದಿವರ್ಯರು(ಸ) ಕನಸಿನಲ್ಲಿ ಆ ಸೇನೆಯನ್ನು ಕಂಡರು. ಅವರಿಗೆ ತೋರಿಸಲಾದ ದೃಶ್ಯದಿಂದ ಸತ್ಯನಿಷೇಧಿಗಳೂ ಹೆಚ್ಚಿನ ಸಂಖ್ಯೆಯಲ್ಲೇನೂ ಇಲ್ಲವೆಂದು ಪ್ರವಾದಿವರ್ಯರು(ಸ) ಅಂದಾಜಿಸಿದರು.

ಜಗಳಾಡಬೇಡಿರಿ. ಅನ್ಯಥಾ ನಿಮ್ಮಲ್ಲಿ ದೌರ್ಬಲ್ಯವುಂಟಾಗುವುದು ಮತ್ತು ನೀವು ಭೀರುಗಳಾಗಿ ಬಿಡುವಿರಿ. ಸಹನೆಯಿಂದ ವರ್ತಿಸಿರಿ.[16] ಅಲ್ಲಾಹನು ಸಹನಶೀಲರೊಂದಿಗೆ ಇದ್ದಾನೆ.

وَتَذْهَبَ رِيحُكُمْ وَاصْبِرُوا ۚ إِنَّ اللَّهَ
مَعَ الصَّابِرِينَ ﴿٤٦﴾

47. ತಮ್ಮ ಮನೆಗಳಿಂದ ಅಹಂಭಾವದಿಂದಲೂ ಜನರಿಗೆ ತಮ್ಮ ಠೀವಿಯನ್ನು ತೋರಿಸುತ್ತಲೂ ಹೊರಡುವವರ ರೀತಿ ನೀತಿಗಳನ್ನು ಅನುಕರಿಸಬೇಡಿರಿ. ಅಲ್ಲಾಹನ ಮಾರ್ಗದಿಂದ ತಡೆಯುವುದು ಅವರ ನೀತಿ. ಅವರ ಯಾವ ಕೃತ್ಯವೂ ಅಲ್ಲಾಹನ ಹಿಡಿತದಿಂದ ಹೊರಗಿಲ್ಲ.

وَلَا تَكُونُوا كَالَّذِينَ خَرَجُوا مِن دِيَارِهِم
بَطَرًا وَرِئَاءَ النَّاسِ وَيَصُدُّونَ عَن
سَبِيلِ اللَّهِ ۚ وَاللَّهُ بِمَا يَعْمَلُونَ مُحِيطٌ ﴿٤٧﴾

48. ಶೈತಾನನು ಅವರ ದುಷ್ಕರ್ಮಗಳನ್ನು ಅವರ ದೃಷ್ಟಿಗಳಲ್ಲಿ ಸುಂದರವಾಗಿಸಿ ತೋರಿಸಿದ ಹಾಗೂ "ಇಂದು ಜನರಲ್ಲಾರೂ ನಿಮ್ಮನ್ನು ಜಯಿಸಲು ಸಾಧ್ಯವಿಲ್ಲ ಮತ್ತು ನಾನು ನಿಮ್ಮ ಸಂಗಡವಿದ್ದೇನೆ" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. ಆದರೆ ಇತ್ತಂಡಗಳು ಎದುರ್ಗೊಂಡಾಗ ಅವನು ಹಿಮ್ಮೆಟ್ಟಿದನು ಮತ್ತು "ನನ್ನ ಮತ್ತು ನಿಮ್ಮ ಒಡನಾಟವಿಲ್ಲ. ನೀವು ಕಾಣದುದನ್ನು ನಾನು ಕಾಣುತ್ತಿದ್ದೇನೆ. ನನಗೆ ಅಲ್ಲಾಹನ ಭಯವಾಗುತ್ತದೆ ಮತ್ತು ಅಲ್ಲಾಹನು ಅತ್ಯಂತ ಕಠಿಣವಾಗಿ ಶಿಕ್ಷಿಸುವವನು" ಎಂದು ಹೇಳಿದನು.

وَإِذْ زَيَّنَ لَهُمُ الشَّيْطَانُ أَعْمَالَهُمْ وَقَالَ
لَا غَالِبَ لَكُمُ الْيَوْمَ مِنَ النَّاسِ وَإِنِّي
جَارٌ لَّكُمْ ۖ فَلَمَّا تَرَاءَتِ الْفِئَتَانِ نَكَصَ
عَلَىٰ عَقِبَيْهِ وَقَالَ إِنِّي بَرِيءٌ مِّنكُمْ
إِنِّي أَرَىٰ مَا لَا تَرَوْنَ إِنِّي أَخَافُ اللَّهَ ۚ
وَاللَّهُ شَدِيدُ الْعِقَابِ ﴿٤٨﴾ ع

49. "ಇವರನ್ನಂತು ಇವರ 'ಧರ್ಮ'ವು ಮರುಳುಗೊಳಿಸಿದೆ" ಎಂದು ಕಪಟವಿಶ್ವಾಸಿಗಳೂ ಹೃದಯಗಳಲ್ಲಿ ರೋಗ ತಗಲಿದವರೂ ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ[17] ವಸ್ತುತಃ ಯಾರಾದರೂ

إِذْ يَقُولُ الْمُنَافِقُونَ وَالَّذِينَ فِي قُلُوبِهِم
مَّرَضٌ غَرَّ هَٰؤُلَاءِ دِينُهُمْ ۗ وَمَن

16. ಅರ್ಥಾತ್- ತಮ್ಮ ಭಾವನೆ ಮತ್ತು ಬಯಕೆಗಳನ್ನು ನಿಯಂತ್ರಣದಲ್ಲಿಡಿರಿ. ಆತುರ, ಭಯಾಶಂಕೆ, ದುರಾಶೆ ಮತ್ತು ಸಲ್ಲದ ಉದ್ವೇಗಗಳಿಂದ ದೂರವಿರಿ. ಶಾಂತಚಿತ್ತದಿಂದ ವ್ಯವಧಾನಪೂರ್ವಕ ನಿರ್ಧಾರ ಕೈಗೊಳ್ಳಿರಿ. ಆತಂಕ ಮತ್ತು ಸಂಕಷ್ಟಗಳು ಎದುರಾದರೆ ನೀವು ವಿಚಲಿತರಾಗಬಾರದು. ಉದ್ರೇಕಕಾರಿ ಪರಿಸ್ಥಿತಿ ತಲೆದೋರಿದರೆ ಕೋಪಾವಿಷ್ಟರಾಗಿ ಸಲ್ಲದ ವರ್ತನೆಗಳು ನಿಮ್ಮಿಂದ ಆಗಿ ಹೋಗಬಾರದು. ನಿರಂತರ ಸಂಕಷ್ಟ, ಎರಗಿ ಪರಿಸ್ಥಿತಿ ಹದಗೆಡುತ್ತಿರುವುದನ್ನು ಕಂಡಾಗ ನೀವು ಭಯವಿಹ್ವಲರಾಗಿ ಸ್ಥಿಮಿತ ಕಳಕೊಳ್ಳದಿರಿ. ಉದ್ದೇಶ ಸಾಧನೆಯ ಹುಮ್ಮಸ್ಸಿನಲ್ಲಿ ತಲ್ಲಣರಾಗದಿರಿ. ಅಪರಿಪಕ್ವ ಉಪಾಯಗಳು ಮೇಲ್ನೋಟಕ್ಕೆ ಫಲಪ್ರದವಾಗುತ್ತಿರುವಂತೆ ಕಂಡಾಗ ಆತುರದ ತೀರ್ಮಾನ ಕೈಗೊಳ್ಳದಿರಿ. ಲೌಕಿಕ ಪ್ರಯೋಜನ- ಲಾಭಗಳು ಹಾಗೂ ದೇಹೇಚ್ಛೆಗಳ ಆಮಿಷ ನಿಮ್ಮನ್ನು ಸೆಳೆಯಬಯಸಿದರೆ ಅನಿಯಂತ್ರಿತವಾಗಿ ಅದರತ್ತ ಹರಿದು ಹೋಗುವಷ್ಟು ನಿಮ್ಮ ವ್ಯಕ್ತಿತ್ವವನ್ನು ದುರ್ಬಲ ಪಡಿಸಿಕೊಳ್ಳದಿರಿ. 'ಸಹನೆ' ಎಂಬ ಒಂದು ಶಬ್ದದಲ್ಲಿ ಈ ಎಲ್ಲಾ ಅರ್ಥಗಳೂ ಅಡಕವಾಗಿವೆ. ಹೀಗೆ ಎಲ್ಲ ವಿಧದಲ್ಲೂ ಸಹನೆ ತೋರುವವರಿಗೆ ನನ್ನ ಸಹಾಯ ಪ್ರಾಪ್ತವಾಗುವುದು ಎಂದು ಅಲ್ಲಾಹನು ಹೇಳುತ್ತಿದ್ದಾನೆ.

17. ಅರ್ಥಾತ್- ಸಾಧನಾನುಕೂಲತೆಗಳಿಲ್ಲದ ಮುಸ್ಲಿಮರ ಸಣ್ಣ ಗುಂಪು ಕುರೈಶರ ಪ್ರಬಲ ಶಕ್ತಿಯೊಂದಿಗೆ ಸಂಘರ್ಷಿಸಲು ಹೋಗುತ್ತಿರುವುದನ್ನು ಕಂಡು ಮದೀನಾದ ಕಪಟವಿಶ್ವಾಸಿಗಳು ಮತ್ತು ಲೋಕದಲ್ಲಿ ಮೈಮರೆತು ದೇವವಿಸ್ಮೃತಿಯ ರೋಗಕ್ಕೆ ಈಡಾಗಿದ್ದ ಜನರು, "ಈ ವ್ಯಕ್ತಿಗಳು ತಮ್ಮ ಧರ್ಮಭೀರುತನದಿಂದ ಹುಚ್ಚರಾಗಿದ್ದಾರೆ" ಎಂದು ಪರಸ್ಪರ ಹೇಳಿಕೊಳ್ಳುತ್ತಿದ್ದರು. ಈ ಹೋರಾಟದಲ್ಲಿ ಅವರು ಖಂಡಿತ ನಾಶ ಹೊಂದುವರು. ಅವರು ವಿವೇಕವನ್ನೇ ಕಳೆದುಕೊಂಡು ಬಿಡುವ ರೀತಿಯಲ್ಲಿ ಈ ಪ್ರವಾದಿಯು ಅವರ ಮೇಲೆ ಮಂತ್ರ ಊದಿ ಬಿಟ್ಟಿದ್ದಾರೆ. ಕಣ್ಣಾರೆ ಕಂಡೂ ಅವರು ಮೃತ್ಯುದವಡೆಗೆ ಹೊರಟು ಹೋಗುತ್ತಿದ್ದಾರೆ" ಎಂದು ಅವರು ಆಡಿಕೊಳ್ಳುತ್ತಿದ್ದರು.

ಅಲ್ಲಾಹನ ಮೇಲೆ ಭರವಸೆಯನ್ನಿಟ್ಟರೆ ಅಲ್ಲಾಹನು ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ.

يَّتَوَكَّلْ عَلَى اللّٰهِ فَاِنَّ اللّٰهَ عَزِيْزٌ حَكِيْمٌ ﴿٤٩﴾

50. ದೇವಚರರು (ಹತರಾದ) ಸತ್ಯನಿಷೇಧಿಗಳ ಪ್ರಾಣಹರಣ ಮಾಡುತ್ತಿದ್ದಾಗಿನ ಸ್ಥಿತಿಯನ್ನು ನೀವು ನೋಡುತ್ತಿದ್ದರೆ! ಅವರು ಅವರ ಮುಖಗಳ ಹಾಗೂ ಸೊಂಟಗಳ ಮೇಲೆ ಪ್ರಹಾರಗಳನ್ನೆಸಗುತ್ತ, "ಇದೋ ಈಗ ಸುಡುವ ಶಿಕ್ಷೆಯನ್ನು ಸವಿಯಿರಿ.

وَلَوْ تَرٰٓى اِذْ يَتَوَفَّى الَّذِيْنَ كَفَرُوا ۙ الْمَلٰٓئِكَةُ
يَضْرِبُوْنَ وُجُوْهَهُمْ وَاَدْبَارَهُمْ ۚ وَ
ذُوْقُوْا عَذَابَ الْحَرِيْقِ ﴿٥٠﴾

51. ನಿಮ್ಮ ಸ್ವಹಸ್ತಗಳು ಈ ಮುಂಚೆ ಸಿದ್ಧಗೊಳಿಸಿಟ್ಟಿದ್ದ ಸಾಧನಗಳ ಪ್ರತಿಫಲವಿದು. ಅನ್ಯಥಾ ಅಲ್ಲಾಹನು ತನ್ನ ದಾಸರ ಮೇಲೆ ಅಕ್ರಮವೆಸಗುವವನಲ್ಲ" ಎಂದು ಹೇಳುತ್ತಲಿದ್ದರು.

ذٰلِكَ بِمَا قَدَّمَتْ اَيْدِيْكُمْ وَاَنَّ اللّٰهَ
لَيْسَ بِظَلَّامٍ لِّلْعَبِيْدِ ﴿٥١﴾

52. ಈ ಘಟನೆಯು ಫಿರ್‌ಔನನ ಜನಾಂಗ ಮತ್ತು ಅವರಿಗಿಂತ ಮುಂಚಿನ ಇತರ ಜನಾಂಗಗಳೊಂದಿಗೆ ಸಂಭವಿಸುತ್ತ ಬಂದಂತೆ ಅವರ ಮೇಲೂ ಸಂಭವಿಸಿತು. ಅವರು ಅಲ್ಲಾಹನ ನಿದರ್ಶನಗಳನ್ನು ನಿರಾಕರಿಸಿದರು ಮತ್ತು ಅಲ್ಲಾಹನು ಅವರ ಪಾಪಗಳಿಗಾಗಿ ಅವರನ್ನು ಹಿಡಿದು ಬಿಟ್ಟನು. ಅಲ್ಲಾಹನು ಪ್ರಬಲನೂ ಅತ್ಯಂತ ಕಠಿಣವಾಗಿ ದಂಡಿಸುವವನೂ ಆಗಿರುತ್ತಾನೆ.

كَدَاْبِ اٰلِ فِرْعَوْنَ ۙ وَالَّذِيْنَ مِنْ قَبْلِهِمْ ۗ
كَفَرُوْا بِاٰيٰتِ اللّٰهِ فَاَخَذَهُمُ اللّٰهُ بِذُنُوْبِهِمْ ۗ
اِنَّ اللّٰهَ قَوِيٌّ شَدِيْدُ الْعِقَابِ ﴿٥٢﴾

53. ಇದೇಕೆಂದರೆ ಅಲ್ಲಾಹನು ಯಾವುದೇ ಜನಾಂಗದ ಮೇಲೆ ಮಾಡಿದ ಅನುಗ್ರಹವನ್ನು ಆ ಜನಾಂಗ ತನ್ನನ್ನು ತಾನೇ ಬದಲಾಯಿಸಿ ಕೊಳ್ಳುವವರೆಗೂ ಬದಲಾಯಿಸುವ ಪರಿಪಾಟ ಅವನಿಗಿಲ್ಲ. ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

ذٰلِكَ بِاَنَّ اللّٰهَ لَمْ يَكُ مُغَيِّرًا نِّعْمَةً
اَنْعَمَهَا عَلٰى قَوْمٍ حَتّٰى يُغَيِّرُوْا مَا بِاَنْفُسِهِمْ ۙ
وَاَنَّ اللّٰهَ سَمِيْعٌ عَلِيْمٌ ﴿٥٣﴾

54. ಫಿರ್‌ಔನನ ಜನಾಂಗ ಮತ್ತು ಅದಕ್ಕಿಂತ ಮುಂಚಿನ ಜನಾಂಗದವರ ಮೇಲೆ ಸಂಭವಿಸಿದುದೆಲ್ಲ ಇದೇ ನಿಯಮಕ್ಕನುಸಾರವಾಗಿತ್ತು. ಅವರು ತಮ್ಮ ಪ್ರಭುವಿನ ನಿದರ್ಶನಗಳನ್ನು ಸುಳ್ಳಾಗಿಸಿದರು. ಆಗ ನಾವು ಅವರ ಪಾಪಗಳ ಫಲವಾಗಿ ಅವರನ್ನು ನಾಶಗೊಳಿಸಿದೆವು ಮತ್ತು ಫಿರ್‌ಔನನ ಜನಾಂಗವನ್ನು ಮುಳುಗಿಸಿದೆವು. ಇವರೆಲ್ಲರೂ ಅಕ್ರಮಿಗಳಾಗಿದ್ದರು.

كَدَاْبِ اٰلِ فِرْعَوْنَ ۙ وَالَّذِيْنَ مِنْ قَبْلِهِمْ ۗ
كَذَّبُوْا بِاٰيٰتِ رَبِّهِمْ فَاَهْلَكْنٰهُمْ بِذُنُوْبِهِمْ
وَاَغْرَقْنَآ اٰلَ فِرْعَوْنَ ۚ وَكُلٌّ كَانُوْا
ظٰلِمِيْنَ ﴿٥٤﴾

55. ನಿಶ್ಚಯವಾಗಿಯೂ ಭೂಮಿಯ ಮೇಲೆ ಚಲಿಸುವ ಸೃಷ್ಟಿಗಳಲ್ಲಿ ಸತ್ಯವನ್ನು ನಿರಾಕರಿಸುವವರೇ ಅಲ್ಲಾಹನ ಬಳಿ ಅತ್ಯಂತ ನಿಕೃಷ್ಟರು. ಅವರು ಎಷ್ಟು ಮಾತ್ರಕ್ಕೂ ವಿಶ್ವಾಸವಿರಿಸುವವರಲ್ಲ.

اِنَّ شَرَّ الدَّوَآبِّ عِنْدَ اللّٰهِ الَّذِيْنَ كَفَرُوْا
فَهُمْ لَا يُؤْمِنُوْنَ ﴿٥٥﴾

56. (ಮುಖ್ಯವಾಗಿ) ಅವರ ಪೈಕಿ ನಿಮ್ಮೊಡನೆ ಒಪ್ಪಂದ ಮಾಡಿ

اَلَّذِيْنَ عٰهَدْتَّ مِنْهُمْ ثُمَّ يَنْقُضُوْنَ

ಕೊಂಡವರು. ಅವರು ಪ್ರತಿ ಸಲವೂ ಅದನ್ನು ಮುರಿಯುತ್ತಾರೆ ಮತ್ತು ಸ್ವಲ್ಪವೂ ಅಲ್ಲಾಹನ ಭಯವಿರಿಸುವುದಿಲ್ಲ.[18]

عَهْدَهُمْ فِي كُلِّ مَرَّةٍ وَّهُمْ لَا يَتَّقُونَ ﴿٥٦﴾

57. ಅವರು ಯುದ್ಧದಲ್ಲಿ ನಿಮಗೆ ಸೆರೆ ಸಿಕ್ಕಿದರೆ ಮುಂದೆ ಇದೇ ನೀತಿಯನ್ನನುಸರಿಸುವ ಇತರರಿಗೆ ಒಂದು ಪಾಠವಾಗುವ ರೀತಿಯಲ್ಲಿ ತಕ್ಕ ಶಿಕ್ಷೆ ಕೊಡಿರಿ.[19]

فَإِمَّا تَثْقَفَنَّهُمْ فِي الْحَرْبِ فَشَرِّدْ بِهِم مَّنْ خَلْفَهُمْ لَعَلَّهُمْ يَذَّكَّرُونَ ﴿٥٧﴾

58. ನಿಮಗೆಂದಾದರೂ ಯಾವುದಾದರೊಂದು ಜನಾಂಗದಿಂದ ವಂಚನೆಯ ಆಶಂಕೆಯಿದ್ದರೆ ಅದರ ಕರಾರನ್ನು ಅದರ ಮುಂದೆ ಎಸೆದು ಬಿಡಿರಿ.[20] ನಿಶ್ಚಯವಾಗಿಯೂ ಅಲ್ಲಾಹನು ವಂಚಕರನ್ನು ಮೆಚ್ಚುವುದಿಲ್ಲ.

وَإِمَّا تَخَافَنَّ مِن قَوْمٍ خِيَانَةً فَانبِذْ إِلَيْهِمْ عَلَىٰ سَوَاءٍ ۚ إِنَّ اللَّهَ لَا يُحِبُّ الْخَائِنِينَ ﴿٥٨﴾

59. ಸತ್ಯನಿಷೇಧಿಗಳು ತಾವು ಗೆದ್ದೆವೆಂಬ ಅಪಗ್ರಹಿಕೆಯಲ್ಲಿರುವುದು ಬೇಡ. ಖಂಡಿತವಾಗಿಯೂ ಅವರು ನಮ್ಮನ್ನು ಸೋಲಿಸಲಾರರು.

وَلَا يَحْسَبَنَّ الَّذِينَ كَفَرُوا سَبَقُوا ۚ إِنَّهُمْ لَا يُعْجِزُونَ ﴿٥٩﴾

60. ನೀವು ನಿಮ್ಮಿಂದ ಸಾಧ್ಯವಾದಷ್ಟು ಹೆಚ್ಚು ಶಕ್ತಿಯನ್ನು ಹಾಗೂ ಸಾಕಿ ಸಿದ್ಧಗೊಳಿಸಿದ ಕುದುರೆಗಳನ್ನು ಅವರೊಡನೆ ಹೋರಾಟ ನಡೆಸಲಿಕ್ಕಾಗಿ ಅಣಿಗೊಳಿಸಿಕೊಳ್ಳಿರಿ.[21] ಇದರ ಮೂಲಕ ಅಲ್ಲಾಹನ ಶತ್ರು, ನಿಮ್ಮ ಶತ್ರು ಮತ್ತು ನಿಮಗೆ ಅರಿವಿಲ್ಲದ ಹಾಗೂ ಅಲ್ಲಾಹನಿಗೆ ಅರಿವಿರುವ ಇತರ ಶತ್ರುಗಳನ್ನು ಭೀತಿಗೊಳಿಸಲಿಕ್ಕಾಗಿ. ಅಲ್ಲಾಹನ ಮಾರ್ಗದಲ್ಲಿ ನೀವು ಏನೆಲ್ಲಾ ಖರ್ಚು ಮಾಡುವಿರೋ ಅದರ ಸರ್ವ ಸಂಪೂರ್ಣ ಪ್ರತಿಫಲವನ್ನು ನಿಮಗೆ ಮರಳಿಸಲಾಗುವುದು ಮತ್ತು ನಿಮ್ಮೊಂದಿಗೆ ಎಷ್ಟು ಮಾತ್ರಕ್ಕೂ ಅನ್ಯಾಯ ಮಾಡಲಾಗದು.

وَأَعِدُّوا لَهُم مَّا اسْتَطَعْتُم مِّن قُوَّةٍ وَّمِن رِّبَاطِ الْخَيْلِ تُرْهِبُونَ بِهِ عَدُوَّ اللَّهِ وَعَدُوَّكُمْ وَآخَرِينَ مِن دُونِهِمْ لَا تَعْلَمُونَهُمُ ۚ اللَّهُ يَعْلَمُهُمْ ۚ وَمَا تُنفِقُوا مِن شَيْءٍ فِي سَبِيلِ اللَّهِ يُوَفَّ إِلَيْكُمْ وَأَنتُمْ لَا تُظْلَمُونَ ﴿٦٠﴾

18. ಇಲ್ಲಿ ವಿಶೇಷವಾಗಿ ಯಹೂದಿಯರ ಕಡೆಗೆ ಸೂಚಿಸಲಾಗಿದೆ. ಅವರ ಮತ್ತು ಮುಹಮ್ಮದ್‌ರ(ಸ) ನಡುವೆ ಒಪ್ಪಂದ ಏರ್ಪಟ್ಟಿತ್ತು. ಅದರ ಹೊರತಾಗಿಯೂ ಅವರು ಪ್ರವಾದಿವರ್ಯರು(ಸ) ಮತ್ತು ಮುಸ್ಲಿಮರನ್ನು ವಿರೋಧಿಸುವುದರಲ್ಲಿ ನಿರತರಾಗಿದ್ದರು. ಬದ್ರ್ ಯುದ್ಧವಾದ ತಕ್ಷಣ ಅವರು ಪ್ರತೀಕಾರ ತೀರಿಸುವಂತೆ ಕುರೈಶರನ್ನು ಕೆರಳಿಸಲಾರಂಭಿಸಿದರು.

19. ಅಂದರೆ ಯಾವುದೇ ಜನಾಂಗದೊಂದಿಗೆ ನಮಗೆ ಒಪ್ಪಂದವಿರುವಾಗ ಅವರು ಒಪ್ಪಂದದ ಹೊಣೆಗಾರಿಕೆಗಳನ್ನೆಲ್ಲಾ ಒತ್ತಟ್ಟಿಗಿರಿಸಿ ನಮ್ಮ ವಿರುದ್ಧ ಯಾವುದೇ ಯುದ್ಧದಲ್ಲಿ ಭಾಗವಹಿಸಿದರೆ, ನಾವೂ ಒಪ್ಪಂದದ ನೈತಿಕ ಹೊಣೆಗಾರಿಕೆಗಳಿಂದ ಮುಕ್ತವಾಗಿ ಬಿಡುತ್ತೇವೆ. ಅವರೊಂದಿಗೆ ನಾವು ಯುದ್ಧ ಮಾಡಬಹುದು. ಹಾಗೆಯೇ ಯಾವುದಾದರೂ ಜನಾಂಗದೊಂದಿಗೆ ಯುದ್ಧ ನಿರತವಾಗಿರುವಾಗ ಒಪ್ಪಂದವಿರುವ ಜನಾಂಗದ ವ್ಯಕ್ತಿಗಳೂ ಶತ್ರುಗಳ ಜತೆ ಶಾಮೀಲಾಗಿರುವುದನ್ನು ಕಂಡರೆ, ಅವರನ್ನು ವಧಿಸಲು ಮತ್ತು ಅವರ ಜತೆ ಶತ್ರುಗಳಂತೆ ವರ್ತಿಸಲು ನಾವು ಕಿಂಚಿತ್ತೂ ಸಂಕೋಚಪಡಬೇಕಾಗಿಲ್ಲ.

20. ಅರ್ಥಾತ್ "ನಮ್ಮ-ನಿಮ್ಮ ನಡುವೆ ಯಾವ ಒಪ್ಪಂದವೂ ಇಲ್ಲ. ಏಕೆಂದರೆ ನೀವು ಒಪ್ಪಂದವನ್ನು ಮುರಿದಿದ್ದೀರಿ" ಎಂದು ಅವರನ್ನು ಸ್ಪಷ್ಟವಾಗಿ ಎಚ್ಚರಿಸಿ ಬಿಡಿರಿ.

21. ಅರ್ಥಾತ್- ಅವಶ್ಯಕತೆ ತಲೆದೋರಿದಾಗ ಕ್ಷಿಪ್ರವಾಗಿ ಯುದ್ಧದ ಕಾರ್ಯಾಚರಣೆ ನಡೆಸಲು ಸಾಧ್ಯವಾಗುವಂತೆ ಯುದ್ಧ ಸಾಮಗ್ರಿ ಮತ್ತು ಸ್ಥಿರವಾದ ಸೇನೆ ಸದಾ ನಿಮ್ಮ ಬಳಿ ಸಿದ್ಧವಿರಬೇಕು. ಅಪಾಯ ಸನ್ನಿಹಿತವಾದಾಗ ಲಗುಬಗೆಯಿಂದ ಸ್ವಯಂಸೇವಕರು, ಶಸ್ತ್ರಾಸ್ತ್ರ ಮತ್ತು ಯುದ್ಧ ಸಾಮಗ್ರಿಗಳನ್ನು ಕಲೆಹಾಕಲು ಪ್ರಯತ್ನಿಸುವ ಸ್ಥಿತಿ ಬರಬಾರದು. ನಿಮ್ಮ ಸಿದ್ಧತೆ ನಡೆಯುತ್ತಿರುವಾಗಲೇ ಶತ್ರುಗಳು ತಮ್ಮ ಕೆಲಸ ಸಾಧಿಸಿ ಬಿಡುವಂತಾಗಬಾರದು.

61. ಓ ಪೈಗಂಬರರೇ, ಶತ್ರುವು ಶಾಂತಿ ಸಂಧಾನಗಳ ಕಡೆಗೆ ವಾಲಿದರೆ ನೀವೂ ಅದಕ್ಕೆ ಸಿದ್ಧರಾಗಿರಿ ಮತ್ತು ಅಲ್ಲಾಹನ ಮೇಲೆ ಭರವಸೆಯನ್ನಿರಿಸಿರಿ. ನಿಶ್ಚಯವಾಗಿಯೂ ಅವನೇ ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَإِن جَنَحُوا لِلسَّلْمِ فَاجْنَحْ لَهَا وَتَوَكَّلْ عَلَى اللَّهِ ۚ إِنَّهُ هُوَ السَّمِيعُ الْعَلِيمُ ٦١

62. ಅವರು ವಂಚಿಸಬೇಕೆಂದೆಣಿಸಿದರೆ ನಿಮಗೆ ಅಲ್ಲಾಹನೇ ಸಾಕು. ತನ್ನ ಸಹಾಯ ಹಸ್ತದಿಂದಲೂ ಸತ್ಯವಿಶ್ವಾಸಿಗಳ ಮೂಲಕವೂ ನಿಮಗೆ ಸಹಕರಿಸಿದವನೂ-

وَإِن يُرِيدُوا أَن يَخْدَعُوكَ فَإِنَّ حَسْبَكَ اللَّهُ ۚ هُوَ الَّذِي أَيَّدَكَ بِنَصْرِهِ وَبِالْمُؤْمِنِينَ ٦٢

63. ಸತ್ಯವಿಶ್ವಾಸಿಗಳ ಹೃದಯಗಳನ್ನು ಪರಸ್ಪರ ಜೋಡಿಸಿದವನೂ ಅವನೇ ತಾನೆ. ನೀವು ಭೂಮಿಯಲ್ಲಿರುವ ಸಕಲ ಸಂಪತ್ತನ್ನು ಖರ್ಚುಮಾಡಿದರೂ ಇವರ ಹೃದಯಗಳನ್ನು ಜೋಡಿಸಲಾಗುತ್ತಿರಲಿಲ್ಲ. ಇವರ ಹೃದಯಗಳನ್ನು ಜೋಡಿಸಿದವನು ಅಲ್ಲಾಹನು. ನಿಶ್ಚಯವಾಗಿಯೂ ಅವನು ಮಹಾ ಪ್ರತಾಪಿಯೂ ಧೀಮಂತನೂ ಆಗಿರುತ್ತಾನೆ.

وَأَلَّفَ بَيْنَ قُلُوبِهِمْ ۚ لَوْ أَنفَقْتَ مَا فِي الْأَرْضِ جَمِيعًا مَّا أَلَّفْتَ بَيْنَ قُلُوبِهِمْ وَلَٰكِنَّ اللَّهَ أَلَّفَ بَيْنَهُمْ ۚ إِنَّهُ عَزِيزٌ حَكِيمٌ ٦٣

64. ಓ ಪೈಗಂಬರರೇ, ನಿಮಗೂ ನಿಮ್ಮ ಅನುಯಾಯಿಗಳಾದ ಸತ್ಯವಿಶ್ವಾಸಿಗಳಿಗೂ ಅಲ್ಲಾಹನೇ ಸಾಕು.

يَا أَيُّهَا النَّبِيُّ حَسْبُكَ اللَّهُ وَمَنِ اتَّبَعَكَ مِنَ الْمُؤْمِنِينَ ٦٤

65. ಓ ಪೈಗಂಬರರೇ, ಸತ್ಯವಿಶ್ವಾಸಿಗಳನ್ನು ಯುದ್ಧಕ್ಕೆ ಪ್ರೇರೇಪಿಸಿರಿ. ನಿಮ್ಮಲ್ಲಿ ಇಪ್ಪತ್ತು ಮಂದಿ ಸಹನಶೀಲರಿದ್ದರೆ ಅವರು ಇನ್ನೂರು ಮಂದಿಯ ಎದುರು ಜಯಗಳಿಸುವರು ಮತ್ತು ಇಂತಹ ನೂರು ಮಂದಿ ಇದ್ದರೆ ಸತ್ಯನಿಷೇಧಿಗಳ ಸಾವಿರ ಮಂದಿಯನ್ನು ಮೀರಿಸ ಬಲ್ಲರು. ಏಕೆಂದರೆ ಅವರು (ಸತ್ಯನಿಷೇಧಿಗಳು) ತಿಳಿಗೇಡಿಗಳು.[22]

يَا أَيُّهَا النَّبِيُّ حَرِّضِ الْمُؤْمِنِينَ عَلَى الْقِتَالِ ۚ إِن يَكُن مِّنكُمْ عِشْرُونَ صَابِرُونَ يَغْلِبُوا مِائَتَيْنِ ۚ وَإِن يَكُن مِّنكُم مِّائَةٌ يَغْلِبُوا أَلْفًا مِّنَ الَّذِينَ كَفَرُوا بِأَنَّهُمْ قَوْمٌ لَّا يَفْقَهُونَ ٦٥

66. ಈಗ ಅಲ್ಲಾಹನು ನಿಮ್ಮ ಭಾರವನ್ನು ಹಗುರಗೊಳಿಸಿದನು ಮತ್ತು ನಿಮ್ಮಲ್ಲಿ ಇನ್ನೂ ದೌರ್ಬಲ್ಯವಿರುವುದೆಂದು ಅವನಿಗೆ ತಿಳಿಯಿತು. ಆದುದರಿಂದ ನಿಮ್ಮಲ್ಲಿ ನೂರು ಮಂದಿ ಸಹನಶೀಲರಿದ್ದರೆ ಅವರು

الْآنَ خَفَّفَ اللَّهُ عَنكُمْ وَعَلِمَ أَنَّ فِيكُمْ ضَعْفًا ۚ فَإِن يَكُن مِّنكُم مِّائَةٌ صَابِرَةٌ

22. ಇಂದಿನ ಪಾರಿಭಾಷಿಕದಲ್ಲಿ 'ನೈತಿಕ ಬಲ' ಅಥವಾ ಚಾರಿತ್ರ್ಯಬಲ (Moral) ಎಂದು ಕರೆಯಲಾಗುವುದನ್ನೇ ಅಲ್ಲಾಹನು ಪ್ರಜ್ಞೆ ಮತ್ತು ತಿಳುವಳಿಕೆ ಎಂದು ವಿವರಿಸಿದ್ದಾನೆ. ತನ್ನ ಜೀವಿತೋದ್ದೇಶದ ಬಗ್ಗೆ ಸರಿಯಾದ ಜ್ಞಾನವಿರುವ ಮತ್ತು ಶಾಂತಚಿತ್ತದಿಂದ ಸರಿಯಾಗಿ ಪರಾಮರ್ಶಿಸಿ ಯುದ್ಧ ಮಾಡುವವನಿಗೆ ತಾನು ಯಾವ ಉದ್ದೇಶಕ್ಕಾಗಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುತ್ತಿದ್ದೇನೋ ಅದು ತನ್ನ ವೈಯಕ್ತಿಕ ಜೀವನಕ್ಕಿಂತ ಅಮೂಲ್ಯವಾದುದು ಎಂದು ತಿಳಿದಿರುತ್ತದೆ. ಆದ್ದರಿಂದ ಅದು ಪ್ರಾಪ್ತವಾಗದಿದ್ದರೆ ತಾನು ಬದುಕಿದರೂ ಬೆಲೆಯಿಲ್ಲವೆಂದು ಅವನು ಭಾವಿಸುತ್ತಾನೆ. ಆದ್ದರಿಂದ ಅವನು, ಇಂತಹ ಜ್ಞಾನವಿಲ್ಲದೆ ಹೋರಾಡುವವನಿಗಿಂತ ಬಹಳ ಹೆಚ್ಚು ಶಕ್ತಿಶಾಲಿಯಾಗಿರುತ್ತಾನೆ. ದೈಹಿಕ ಬಲದಲ್ಲಿ ಅವರ ನಡುವೆ ಯಾವುದೇ ವ್ಯತ್ಯಾಸವಿಲ್ಲದಿದ್ದರೂ ಸರಿಯೇ.

ಇನ್ನೂರರ ಮೇಲೂ ಸಾವಿರ ಮಂದಿ ಇಂಥವರಿದ್ದರೆ ಎರಡು ಸಾವಿರದ ಮೇಲೂ ಅಲ್ಲಾಹನ ಆಜ್ಞೆಯಿಂದ ವಿಜಯಿಗಳಾಗುವರು.[23] ಅಲ್ಲಾಹನು ಸಹನಶೀಲರ ಸಂಗಡವಿದ್ದಾನೆ.

يَّغْلِبُوْا مِائَتَيْنِ ۚ وَاِنْ يَّكُنْ مِّنْكُمْ اَلْفٌ يَّغْلِبُوْٓا اَلْفَيْنِ بِاِذْنِ اللّٰهِ ۗ وَاللّٰهُ مَعَ الصّٰبِرِيْنَ ﴿٦٦﴾

67. ಭೂಮಿಯಲ್ಲಿ ಶತ್ರುಗಳನ್ನು ಚೆನ್ನಾಗಿ ಸದೆಬಡಿಯುವ ವರೆಗೂ ತನ್ನ ಬಳಿ ಸೆರೆಯಾಳುಗಳಿರುವುದು ಓರ್ವ ಪ್ರವಾದಿಗೆ ಶೋಭಿಸುವುದಿಲ್ಲ. ನೀವು ಲೌಕಿಕ ಲಾಭಗಳನ್ನು ಬಯಸುತ್ತೀರಿ. ವಸ್ತುತಃ ಅಲ್ಲಾಹನ ದೃಷ್ಟಿಯಲ್ಲಿ ಪರಲೋಕವಿದೆ. ಅಲ್ಲಾಹನು ಮಹಾಪ್ರತಾಪಿಯೂ ಧೀಮಂತನೂ ಆಗಿರುತ್ತಾನೆ.

مَا كَانَ لِنَبِيٍّ اَنْ يَّكُوْنَ لَهٗٓ اَسْرٰى حَتّٰى يُثْخِنَ فِى الْاَرْضِ ۗ تُرِيْدُوْنَ عَرَضَ الدُّنْيَا ۖ وَاللّٰهُ يُرِيْدُ الْاٰخِرَةَ ۗ وَاللّٰهُ عَزِيْزٌ حَكِيْمٌ ﴿٦٧﴾

68. ಅಲ್ಲಾಹನ ವಿಧಿಯು ಮೊದಲೇ ಲಿಖಿತಗೊಂಡಿಲ್ಲದಿರುತ್ತಿದ್ದರೆ, ನೀವು ಪಡೆದುದರ ಫಲವಾಗಿ ನಿಮಗೆ ಘೋರ ಶಿಕ್ಷೆ ಸಿಗುತ್ತಿತ್ತು.

لَوْلَا كِتٰبٌ مِّنَ اللّٰهِ سَبَقَ لَمَسَّكُمْ فِيْمَآ اَخَذْتُمْ عَذَابٌ عَظِيْمٌ ﴿٦٨﴾

69. ಆದುದರಿಂದ ನೀವು ಪಡೆದಿರುವ ಧರ್ಮಬದ್ಧವೂ ಶುದ್ಧವೂ ಆಗಿರುವ ಸೊತ್ತನ್ನು ಅನುಭೋಗಿಸಿಕೊಳ್ಳಿರಿ ಮತ್ತು ಅಲ್ಲಾಹನನ್ನು ಭಯಪಡುತ್ತಲಿರಿ.[24] ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

فَكُلُوْا مِمَّا غَنِمْتُمْ حَلٰلًا طَيِّبًا ۖ وَّاتَّقُوا اللّٰهَ ۗ اِنَّ اللّٰهَ غَفُوْرٌ رَّحِيْمٌ ﴿٦٩﴾ ع ٩ ٥

70. ಓ ಪೈಗಂಬರರೇ, ನಿಮ್ಮ ವಶದಲ್ಲಿರುವ ಸೆರೆಯಾಳುಗಳೊಡನೆ ಹೇಳಿರಿ: "ನಿಮ್ಮ ಹೃದಯಗಳಲ್ಲೇನಾದರೂ ಒಳಿತು ಇರುವುದೆಂದು ಅಲ್ಲಾಹನಿಗೆ ತಿಳಿದರೆ ಅವನು ನಿಮ್ಮಿಂದ ಪಡೆದುದಕ್ಕಿಂತಲೂ ಉತ್ತಮವಾದುದನ್ನು ನಿಮಗೆ ನೀಡುವನು ಮತ್ತು ನಿಮ್ಮ

يٰٓاَيُّهَا النَّبِيُّ قُلْ لِّمَنْ فِىْٓ اَيْدِيْكُمْ مِّنَ الْاَسْرٰٓى ۙ اِنْ يَّعْلَمِ اللّٰهُ فِىْ قُلُوْبِكُمْ خَيْرًا يُّؤْتِكُمْ خَيْرًا مِّمَّآ اُخِذَ مِنْكُمْ وَيَغْفِرْ

23. ಇದರ ಅರ್ಥ ಮೊದಲು ಒಂದು ಮತ್ತು ಹತ್ತರ ಅನುಪಾತವಿತ್ತು. ಈಗ ದೌರ್ಬಲ್ಯ ಗೋಚರಿಸಿರುವುದರಿಂದ ಒಂದು ಮತ್ತು ಎರಡರ ಅನುಪಾತ ಏರ್ಪಟ್ಟಿತು ಎಂದಲ್ಲ. ಇದರ ನೈಜ ತಾತ್ಪರ್ಯವೇನೆಂದರೆ, ತಾತ್ವಿಕ ಮತ್ತು ಗುಣಮಟ್ಟದ ದೃಷ್ಟಿಯಿಂದ ಸತ್ಯವಿಶ್ವಾಸಿಗಳು ಮತ್ತು ಸತ್ಯನಿಷೇಧಿಗಳ ನಡುವೆ ಒಂದು ಮತ್ತು ಹತ್ತರ ಅನುಪಾತವೇ ಇದೆ. ಆದರೆ ನಿಮ್ಮ ನೈತಿಕ ತರಬೇತಿ ಇನ್ನೂ ಪೂರ್ಣಗೊಂಡಿಲ್ಲ. ಪರಿಜ್ಞಾನ ಮತ್ತು ತಿಳುವಳಿಕೆಯಲ್ಲೂ ನೀವು ಪರಿಪಕ್ವತೆಗೆ ತಲಪಿಲ್ಲ. ಆದ್ದರಿಂದ ನಿಮ್ಮ ದುಪ್ಪಟ್ಟು ಶಕ್ತಿಯಿರುವ ಪತನೋನ್ಮುಖಿ ಜನಾಂಗದೊಂದಿಗೆ ಸಂಘರ್ಷಿಸಲು ನೀವು ಕಿಂಚಿತ್ತೂ ಅಳುಕಬೇಕಾಗಿಲ್ಲ. ಇದು ಹಿ.ಶ. 2ರಲ್ಲಿ ಬಂದ ಬೋಧನೆಗಳು ಎಂಬುದು ಗಮನಾರ್ಹ. ಆ ವೇಳೆ ಅನೇಕ ಮುಸ್ಲಿಮರು ಆಗ ತಾನೇ ಇಸ್ಲಾಮಿನೊಳಗೆ ಪ್ರವೇಶಿಸಿದವರಾಗಿದ್ದರು ಮತ್ತು ಅವರು ತರಬೇತಿಯ ಪ್ರಾಥಮಿಕ ಹಂತದಲ್ಲಿದ್ದರು.

24. ಬದ್ರ್ ಯುದ್ಧಕ್ಕೆ ಮೊದಲು ಮುಹಮ್ಮದ್ ಅಧ್ಯಾಯದಲ್ಲಿ ಯುದ್ಧದ ಕುರಿತು ನೀಡಲಾಗಿದ್ದ ಆರಂಭಿಕ ಮಾರ್ಗದರ್ಶನಗಳಲ್ಲಿ ಯುದ್ಧ ಕೈದಿಗಳಿಂದ ಪರಿಹಾರಧನ ವಸೂಲು ಮಾಡುವ ಅನುಮತಿ ನೀಡಲಾಗಿತ್ತು. ಅದರ ಜತೆಗೆ "ಮೊದಲು ಶತ್ರುಗಳ ಬಲವನ್ನು ಸಂಪೂರ್ಣ ಮುರಿಯಬೇಕು, ಅನಂತರ ಯುದ್ಧಕೈದಿಗಳನ್ನು ಹಿಡಿಯಬೇಕು" ಎಂಬ ಶರತ್ತನ್ನೂ ವಿಧಿಸಲಾಗಿತ್ತು. ಈ ಆದೇಶದ ಪ್ರಕಾರ ಮುಸ್ಲಿಮರು ಬದ್ರ್ ಯುದ್ಧದಲ್ಲಿ ಕೈದಿಗಳನ್ನು ಹಿಡಿದು ಅವರಿಂದ ಪರಿಹಾರ ಧನ ವಸೂಲು ಮಾಡಿದ್ದರು. ಅವರ ಕೆಲಸ ಅನುಮತಿಗೆ ಅನುಗುಣವಾಗಿಯೇ ಇತ್ತು. ಆದರೆ ಶತ್ರುಗಳ ಶಕ್ತಿಯನ್ನು ಸಂಪೂರ್ಣ ಉಡುಗಿಸುವ ಶರತ್ತನ್ನು ಈಡೇರಿಸುವ ಮೊದಲೇ ಅವರು ಕೈದಿಗಳನ್ನು ಹಿಡಿಯುವ ಮತ್ತು ಸಮರಾರ್ಜಿತ ಸೊತ್ತನ್ನು ಸಂಗ್ರಹಿಸುವ ಕೆಲಸಕ್ಕೆ ತೊಡಗಿದರು. ಇದರ ಬಗ್ಗೆಯೇ ಅಲ್ಲಾಹನು ತನ್ನ ಅಪ್ರಿಯತೆಯನ್ನು ಪ್ರಕಟಿಸಿದ್ದಾನೆ. ಏಕೆಂದರೆ ಹೀಗೆ ಮಾಡುವ ಬದಲು ಮುಸ್ಲಿಮರು ಸತ್ಯನಿಷೇಧಿಗಳನ್ನು ಹಿಂಬಾಲಿಸಿದ್ದರೆ ಆಗಲೇ ಕುರೈಶರ ಬಲವನ್ನು ಮುರಿದು ಬಿಡಬಹುದಾಗಿತ್ತು.

لَكُمْ ۗ وَاللَّهُ غَفُورٌ رَّحِيمٌ ﴿٧٠﴾

ಅಪರಾಧಗಳನ್ನು ಕ್ಷಮಿಸುವನು. ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."

وَإِن يُرِيدُوا خِيَانَتَكَ فَقَدْ خَانُوا اللَّهَ
مِن قَبْلُ فَأَمْكَنَ مِنْهُمْ ۗ وَاللَّهُ عَلِيمٌ حَكِيمٌ ﴿٧١﴾

71. ಆದರೆ ನಿಮ್ಮನ್ನು ವಂಚಿಸುವ ಇರಾದೆ ಅವರಿಗಿದ್ದರೆ ಅವರು ಇದಕ್ಕಿಂತ ಮುಂಚೆ ಅಲ್ಲಾಹನನ್ನು ವಂಚಿಸಿದ್ದಾರೆ. ಇದರ ಫಲವಾಗಿಯೇ ಅವರನ್ನು ನಿಮ್ಮ ವಶಕ್ಕೆ ಕೊಡುವ ಶಿಕ್ಷೆಯನ್ನು ಅಲ್ಲಾಹನು ಅವರಿಗೆ ಕೊಟ್ಟನು. ಅಲ್ಲಾಹನು ಸರ್ವಜ್ಞನೂ ಧೀಮಂತನೂ ಆಗಿರುತ್ತಾನೆ.

إِنَّ الَّذِينَ آمَنُوا وَهَاجَرُوا وَجَاهَدُوا
بِأَمْوَالِهِمْ وَأَنفُسِهِمْ فِي سَبِيلِ اللَّهِ
وَالَّذِينَ آوَوا وَّنَصَرُوا أُولَٰئِكَ بَعْضُهُمْ
أَوْلِيَاءُ بَعْضٍ ۚ وَالَّذِينَ آمَنُوا وَلَمْ يُهَاجِرُوا
مَا لَكُم مِّن وَلَايَتِهِم مِّن شَيْءٍ حَتَّىٰ
يُهَاجِرُوا ۚ وَإِنِ اسْتَنصَرُوكُمْ فِي الدِّينِ
فَعَلَيْكُمُ النَّصْرُ إِلَّا عَلَىٰ قَوْمٍ بَيْنَكُمْ وَ
بَيْنَهُم مِّيثَاقٌ ۗ وَاللَّهُ بِمَا تَعْمَلُونَ بَصِيرٌ ﴿٧٢﴾

72. 'ಸತ್ಯವಿಶ್ವಾಸ' ಸ್ವೀಕರಿಸಿದವರೂ 'ವಲಸೆ' (ಹಿಜ್ರತ್) ಮಾಡಿದವರೂ ಅಲ್ಲಾಹನ ಮಾರ್ಗದಲ್ಲಿ ತಮ್ಮ ತನುಗಳಿಂದ ಹೋರಾಡಿದವರೂ ಧನವನ್ನು ವ್ಯಯಿಸಿದವರೂ 'ವಲಸೆ' ಮಾಡಿದವರಿಗೆ ಆಶ್ರಯ ಮತ್ತು ಸಹಾಯವನ್ನು ಕೊಟ್ಟವರೂ ವಾಸ್ತವದಲ್ಲಿ ಪರಸ್ಪರ ರಕ್ಷಕ ಮಿತ್ರರು. ವಿಶ್ವಾಸವಿರಿಸಿದರೂ 'ವಲಸೆ' ಮಾಡಿ (ಇಸ್ಲಾಮಿ ರಾಷ್ಟ್ರಕ್ಕೆ) ಬಾರದವರೊಂದಿಗೆ ಅವರು 'ವಲಸೆ' ಮಾಡಿ ಬರುವವರೆಗೂ ನಿಮ್ಮ (ವಿಲಾಯತ್) ಸ್ನೇಹ ಸಂಬಂಧವಿಲ್ಲ.[25] ಅವರು ಧರ್ಮ ಕಾರ್ಯದಲ್ಲಿ ನಿಮ್ಮಿಂದ ಸಹಾಯ ಕೋರಿದರೆ ಅವರಿಗೆ ಸಹಾಯ ಮಾಡಬೇಕಾದುದು ನಿಮ್ಮ ಮೇಲೆ ಕಡ್ಡಾಯ ವಾಗಿದೆ. ಆದರೆ, ಇದು ನಿಮ್ಮೊಂದಿಗೆ ಒಪ್ಪಂದಬದ್ಧ ಜನಾಂಗದ ವಿರುದ್ಧವಾಗಿರಬಾರದು.[26] ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹನು ವೀಕ್ಷಿಸುತ್ತಾನೆ.

25. ಅರಬಿ ಭಾಷೆಯಲ್ಲಿ 'ವಿಲಾಯತ್' ಎಂಬ ಪದ ಬೆಂಬಲ, ಸಹಾಯ, ಸಹಯೋಗ, ಸ್ನೇಹ, ಸಾಮೀಪ್ಯ, ಮೇಲ್ವಿಚಾರಣೆ ಮತ್ತು ಇಂತಹುದೇ ಅರ್ಥದಲ್ಲಿ ಪ್ರಯೋಗಿಸಲ್ಪಡುತ್ತದೆ. ಈ ಸೂಕ್ತದ ಹಿನ್ನೆಲೆಯಲ್ಲಿ ಪ್ರಜೆಗಳಿಗೆ ಸರ್ಕಾರದೊಂದಿಗೂ, ಸರ್ಕಾರಕ್ಕೆ ಪ್ರಜೆಗಳೊಂದಿಗೂ ಇರುವ ಸಂಬಂಧವಲ್ಲದೆ ಪ್ರಜೆಗಳ ನಡುವೆ ಇರಬೇಕಾದ ಪರಸ್ಪರ ಸಂಬಂಧದ ಕಡೆಗೆ ಸೂಚಿಸಲಾಗಿದೆ. ಆದ್ದರಿಂದ ಈ ಸೂಕ್ತ ಸಾಂವಿಧಾನಿಕ ಮತ್ತು ರಾಜಕೀಯ ಮೇಲ್ವಿಚಾರಣೆಯನ್ನು ಇಸ್ಲಾಮಿ ಸಾಮ್ರಾಜ್ಯದ ಭೌಗೋಳಿಕ ಗಡಿಗೆ ಸೀಮಿತಗೊಳಿಸುತ್ತದೆ. ಗಡಿಯಾಚೆ ವಾಸಿಸುವ ಮುಸ್ಲಿಮರನ್ನು ಈ ವಿಶಿಷ್ಟ ಸಂಬಂಧದಿಂದ ಹೊರತು ಪಡಿಸಲಾಗಿದೆ. ಹೀಗೆ ಸಂಬಂಧ ಕಡಿದುಕೊಳ್ಳುವುದರಿಂದ ಉಂಟಾಗುವ ಶಾಸನಾತ್ಮಕ ಪರಿಣಾಮಗಳು ಅತ್ಯಂತ ವಿಸ್ತೃತವಾದುದು. ಅದರ ವಿವರಗಳಿಗೆ ಹೋಗಲು ಇಲ್ಲಿ ಅವಕಾಶವಿಲ್ಲ.

26. ಮೇಲಿನ ಸೂಕ್ತದಲ್ಲಿ 'ದಾರುಲ್ ಇಸ್ಲಾಮ್'(ಇಸ್ಲಾಮಿ ರಾಷ್ಟ್ರ)ನಿಂದ ಹೊರಗೆ ವಾಸಿಸುವ ಮುಸ್ಲಿಮರನ್ನು ರಾಜಕೀಯ ಮೇಲ್ವಿಚಾರಣೆಯ ಸಂಬಂಧದಿಂದ ಮುಕ್ತಗೊಳಿಸಲಾಗಿತ್ತು. ಈ ಸೂಕ್ತದಲ್ಲಿ ಪ್ರಸ್ತುತ ಸ್ವರೂಪದ ಸಂಬಂಧದಿಂದ ಅವರು ಹೊರತಾಗಿದ್ದರೂ 'ಧಾರ್ಮಿಕ ಸಂಬಂಧ'ದಿಂದ ಅವರೆಂದೂ ಮುಕ್ತರಲ್ಲ ಎಂದು ವಿವರಿಸಲಾಗುತ್ತಿದೆ. ಅವರ ಮೇಲೆ ಅನ್ಯಾಯವಾಗುತ್ತಿರುವಾಗ ಅವರು ತಮ್ಮ ಇಸ್ಲಾಮಿ ಭ್ರಾತೃತ್ವದ ಸಂಬಂಧದ ಆಧಾರದಲ್ಲಿ ಇಸ್ಲಾಮಿ ಸಾಮ್ರಾಜ್ಯದಿಂದ ಸಹಾಯ ಯಾಚಿಸಿದರೆ ತಮ್ಮ ಶೋಷಿತ ಬಂಧುಗಳಿಗೆ ನೆರವಾಗುವುದು ಅವರ ಕರ್ತವ್ಯವಾಗಿದೆ. ಅದರ ಜತೆಗೆ ಇನ್ನೊಂದು ಸ್ಪಷ್ಟೀಕರಣವನ್ನೂ ನೀಡಲಾಗುತ್ತಿದೆ. ಇಸ್ಲಾಮಿ ಭ್ರಾತೃಗಳ ಮೇಲಿರುವ ಕರ್ತವ್ಯವನ್ನು ನಿಯಮಬಾಹಿರವಾಗಿ ಒಟ್ಟಾರೆ ಈಡೇರಿಸಲಾಗುವುದಿಲ್ಲ. ಅಂತಾರಾಷ್ಟ್ರೀಯ ಹೊಣೆಗಾರಿಕೆಗಳು ಮತ್ತು ನೈತಿಕ ಮೇರೆಗಳನ್ನು ಗಮನದಲ್ಲಿರಿಸುತ್ತಲೇ ಆ ಕರ್ತವ್ಯವನ್ನು ಈಡೇರಿಸಲಾಗುವುದು. ಅನ್ಯಾಯವೆಸಗುತ್ತಿರುವ ಜನಾಂಗದೊಂದಿಗೆ ಇಸ್ಲಾಮಿ ರಾಷ್ಟ್ರದ ಒಪ್ಪಂದಗಳಿದ್ದರೆ, ಶೋಷಿತ ಮುಸ್ಲಿಮರಿಗೆ ನೆರವಾಗುವ ವೇಳೆ ಪ್ರಸ್ತುತ ಒಪ್ಪಂದದ ನೈತಿಕ ಹೊಣೆಗಾರಿಕೆಗಳ ಉಲ್ಲಂಘನೆಯಾಗದಂತೆ ಎಚ್ಚರವಹಿಸಲಾಗುವುದು.

73. ಸತ್ಯನಿಷೇಧಿಗಳು ಪರಸ್ಪರ ರಕ್ಷಕ ಮಿತ್ರರಾಗಿರುತ್ತಾರೆ. ನೀವು ಹಾಗೆ ಮಾಡದಿದ್ದರೆ ಭೂಮಿಯಲ್ಲಿ ಗೊಂದಲವೂ ಹಿರಿದಾದ ಕ್ಷೋಭೆಯೂ ಉಂಟಾಗುವುದು.[27]

وَالَّذِينَ كَفَرُوا بَعْضُهُمْ أَوْلِيَاءُ بَعْضٍ ۚ إِلَّا
تَفْعَلُوهُ تَكُنْ فِتْنَةٌ فِي الْأَرْضِ وَفَسَادٌ كَبِيرٌ ﴿٧٣﴾

74. ಸತ್ಯವಿಶ್ವಾಸ ಸ್ವೀಕರಿಸಿದವರು, ಅಲ್ಲಾಹನ ಮಾರ್ಗದಲ್ಲಿ ಮನೆ ಮಾರುಗಳನ್ನು ಬಿಟ್ಟವರು, ಜೀವನದ ಹಂಗುತೊರೆದು ಹೋರಾಡಿದವರು, ಆಶ್ರಯ ನೀಡಿದವರು ಮತ್ತು ಸಹಾಯ ಮಾಡಿದವರು ಅವರೇ ನಿಜವಾದ 'ಸತ್ಯವಿಶ್ವಾಸಿಗಳು.' ಅವರ ಪಾಲಿಗೆ ಕ್ಷಮೆಯೂ ಅತ್ಯುತ್ತಮ ಜೀವನಾಂಶವೂ ಇದೆ.

وَالَّذِينَ آمَنُوا وَهَاجَرُوا وَجَاهَدُوا فِي
سَبِيلِ اللَّهِ وَالَّذِينَ آوَوْا وَنَصَرُوا أُولَٰئِكَ
هُمُ الْمُؤْمِنُونَ حَقًّا ۚ لَهُمْ مَغْفِرَةٌ
وَرِزْقٌ كَرِيمٌ ﴿٧٤﴾

75. ಅನಂತರ ವಿಶ್ವಾಸವಿಟ್ಟವರು, 'ವಲಸೆ' ಮಾಡಿ ಬಂದವರು ಮತ್ತು ನಿಮ್ಮೊಟ್ಟಿಗೆ ಕೂಡಿಕೊಂಡು ಹೋರಾಡಿದವರು ಸಹ ನಿಮ್ಮೊಂದಿಗೆ ಸೇರಿದ್ದಾರೆ. ಆದರೆ ಅಲ್ಲಾಹನ ಗ್ರಂಥದಲ್ಲಿ ರಕ್ತ ಸಂಬಂಧಿಕರು ಪರಸ್ಪರ ಹೆಚ್ಚು ಹಕ್ಕುದಾರರು.[28] ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಸ್ತುಗಳ ಜ್ಞಾನಿಯಾಗಿರುತ್ತಾನೆ.

وَالَّذِينَ آمَنُوا مِنْ بَعْدُ وَهَاجَرُوا وَ
جَاهَدُوا مَعَكُمْ فَأُولَٰئِكَ مِنْكُمْ ۚ وَأُولُو
الْأَرْحَامِ بَعْضُهُمْ أَوْلَىٰ بِبَعْضٍ فِي كِتَابِ
اللَّهِ ۗ إِنَّ اللَّهَ بِكُلِّ شَيْءٍ عَلِيمٌ ﴿٧٥﴾

---

27. ಅರ್ಥಾತ್- 'ದಾರುಲ್ ಇಸ್ಲಾಮ್'ನ ಮುಸ್ಲಿಮರು ಪರಸ್ಪರ ರಕ್ಷಕ ಮಿತ್ರರಾಗಿ ಮಾರ್ಪಡದಿದ್ದರೆ, ವಲಸೆ ಬಂದು 'ದಾರುಲ್ ಇಸ್ಲಾಮ್'ನಲ್ಲಿ ನೆಲೆಸದೆ 'ದಾರುಲ್ ಕುಫ್ರ್'ನಲ್ಲೇ ಉಳಿದು ಬಿಡುವವರನ್ನು 'ದಾರುಲ್ ಇಸ್ಲಾಮ್'ನ ಮುಸ್ಲಿಮರು ತಮ್ಮ 'ರಾಜಕೀಯ ಮೇಲ್ವಿಚಾರಣೆ' ಯಿಂದ ಹೊರತಾಗಿರುವವರೆಂದು ಭಾವಿಸದಿದ್ದರೆ, ಹೊರಗಿನ ಶೋಷಿತ ಮುಸ್ಲಿಮರು ಸಹಾಯ ಯಾಚಿಸಿದಾಗ ಅವರಿಗೆ ನೆರವಾಗದಿದ್ದರೆ, ಯಾರೊಂದಿಗೆ ಇಸ್ಲಾಮೀ ರಾಷ್ಟ್ರದ ಒಪ್ಪಂದವಿರುವುದೋ ಅವರಿಗೆ ವಿರುದ್ಧವಾಗಿ ಮುಸ್ಲಿಮರಿಗೆ ನೆರವಾಗಬಾರದು ಎಂಬ ನಿಯಮವನ್ನೂ ಪಾಲಿಸಲಾಗದಿದ್ದರೆ ಹಾಗೂ ಮುಸ್ಲಿಮರು ಸತ್ಯನಿಷೇಧಿಗಳ ಸ್ನೇಹ ಸಂಬಂಧವನ್ನು ನಿಲ್ಲಿಸಿಬಿಡದಿದ್ದರೆ ಭೂಮಿಯಲ್ಲಿ ದೊಡ್ಡ ಕ್ಷೋಭೆ ಮತ್ತು ಗೊಂದಲ ಹುಟ್ಟಿಕೊಳ್ಳುವುದು.

28. ಅರ್ಥಾತ್- ಆಸ್ತಿಯ ವಿಂಗಡನೆಯು ಕೌಟುಂಬಿಕ ಸಂಬಂಧದ ಆಧಾರದಲ್ಲಿ ನಡೆಯುವುದೇ ಹೊರತು ಇಸ್ಲಾಮೀ ಭ್ರಾತೃತ್ವದ ಆಧಾರದಲ್ಲಿ ಅಲ್ಲ. "ಮುಸ್ಲಿಮರಾದ ಸಂಬಂಧಿಕರು ಮಾತ್ರ ಪರಸ್ಪರರ ವಾರೀಸುದಾರರಾಗಿದ್ದಾರೆ. ಮುಸ್ಲಿಮನು ಯಾವುದೇ ಸತ್ಯನಿಷೇಧಿಯ ಅಥವಾ ಸತ್ಯನಿಷೇಧಿಯು ಯಾವುದೇ ಮುಸ್ಲಿಮನ ವಾರೀಸುದಾರನಾಗಲಾರನು" ಎಂಬ ಪ್ರವಾದಿವಚನ ಈ ಆದೇಶವನ್ನು ವ್ಯಾಖ್ಯಾನಿಸುತ್ತದೆ.